ANANTHKUMAR PRATISHTHANA

# ಅನಂತಪಥ

ಅಭಿವೃದ್ಧಿಪರ ರಾಜಕೀಯ ಮತ್ತು ರಾಷ್ಟ್ರ ನಿರ್ಮಾಣ


ಅನಂತಕುಮಾರ್ ಸ್ಮರಣೆಯ ಮೊದಲ ಉಪನ್ಯಾಸ ಪುಟ-1

ಶ್ರೀ ನಿತಿನ್ ಗಡ್ಕರಿ, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವರು, ಭಾರತ ಸರ್ಕಾರ



ಸಂಪುಟ - 2 | ನವೆಂಬರ್ - 2021 | ಸಂಚಿಕೆ - 5

## ಅನಂತಕುಮಾರ್ ಕನಸಿನ ಪರಿಕಲ್ಪನೆಗೆ ಸಂದ ಗೌರವ



ಅದಮ್ಯ ಚೇತನಕ್ಕೆ ಸ್ವಾತಂತ್ರ್ಯ ಅಮೃತಮಹೋತ್ಸವದ ವಿಶೇಷ ರಾಜ್ಯೋತ್ಸವ ಪ್ರಶಸ್ತಿ

1997ರಲ್ಲಿ ಶ್ರೀ ಅನಂತಕುಮಾರ್ ಅವರು ತಮ್ಮ ತಾಯಿ ಶ್ರೀಮತಿ ಗಿರಿಜಾ ಶಾಸ್ತ್ರಿಯವರ ಸ್ಮರಣೆಯಲ್ಲಿ ಸ್ಥಾಪಿಸಿದ ಸ್ವಯಂಸೇವಾ ಸಂಸ್ಥೆ- ಅದಮ್ಯ ಚೇತನ. ನಾಡಿನ ಸಾವಿರಾರು ಮಕ್ಕಳ ಪೌಷ್ಟಿಕ ಅಗತ್ಯ, ವಿದ್ಯಾಭ್ಯಾಸ ಮತ್ತು ಆರೋಗ್ಯಪಾಲನೆಯ ದೃಷ್ಟಿಯಿಂದ ಅನ್ನ-ಅಕ್ಷರ-ಆರೋಗ್ಯ-ಪ್ರಕೃತಿ ಮತ್ತು, ಸಂಸ್ಕೃತಿಗಳೆಂಬ ಸೂತ್ರಗಳನ್ನು ಧ್ಯೇಯವಾಗಿರಿಸಿಕೊಂಡು ಅದಮ್ಯಚೇತನ ಸಂಸ್ಥೆಯು ಡಾ. ತೇಜಸ್ವಿನಿ ಅನಂತಕುಮಾರರ ಮುಂದಾಳುತನದಲ್ಲಿ ಕಳೆದ 24 ವರುಷಗಳಿಂದ ಯಶಸ್ವಿಯಾಗಿ ಸಮಾಜಸೇವೆ ಸಲ್ಲಿಸುತ್ತ ಬಂದಿದೆ.

ಸ್ವಯಂಸೇವಾಸಂಸ್ಥೆಯ ರೂಪದಲ್ಲಿ ಅದಮ್ಯಚೇತನವು ನಾಡಿನ ವಿವಿಧೆಡೆ ಪ್ರತಿದಿನ 1,80,000 ಮಕ್ಕಳಿಗೆ ಪೌಷ್ಟಿಕ ಆಹಾರವು ಲಭಿಸುವ ವ್ಯವಸ್ಥೆಯನ್ನು ಸರ್ಕಾರದ ನೆರವಿನೊಡನೆ ಹಮ್ಮಿಕೊಳ್ಳುತ್ತ ಬಂದಿದೆ. ಕರ್ನಾಟಕದ ಬೆಂಗಳೂರು, ಹುಬ್ಬಳ್ಳಿ, ಕಲಬುರ್ಗಿಗಳಲ್ಲೂ ರಾಜಸ್ಥಾನದ ಜೋಧ್ ಪುರದಲ್ಲೂ ಇರುವ ನಾಲ್ಕು ಕೇಂದ್ರಿತ ಅಡುಗೆಮನೆಗಳಿಂದ ದಿನನಿತ್ಯ ಆಹಾರ ತಯಾರಿಸಿ ವಿತರಿಸಲಾಗುತ್ತಿದೆ. ಬೆಂಗಳೂರಿನ 290 ಶಾಲೆಗಳ ಒಟ್ಟು 50000 ಮಕ್ಕಳು, ಹುಬ್ಬಳ್ಳಿ-ಧಾರವಾಡ ಭಾಗದ 487 ಗ್ರಾಮಾಂತರ ಶಾಲೆಗಳ 75,000 ವಿದ್ಯಾರ್ಥಿಗಳು, ಕಲ್ಬುರ್ಗಿ ವಿಭಾಗದ 67 ಶಾಲೆಗಳ 10, 000 ವಿದ್ಯಾರ್ಥಿಗಳು ಮತ್ತು ರಾಜಸ್ಥಾನದ ಜೋಧ್ ಪುರ ಪ್ರಾಂತ್ಯದ 260 ಶಾಲೆಗಳ 32,000 ಮಕ್ಕಳು ಪ್ರತಿನಿತ್ಯ ಅದಮ್ಯಚೇತನ ವಿತರಿಸುವ ಮಧ್ಯಾಹ್ನದ ಭೋಜನವನ್ನು ಸವಿಯುತ್ತಿದ್ದಾರೆ. ಇದಲ್ಲದೆ, ಕಲ್ಬುರ್ಗಿ ಭಾಗದ ಹತ್ತು ಸಾವಿರ ಮಕ್ಕಳಿಗೆ ಸತ್ಯಸಾಯಿ ಟ್ರಸ್ಟ್ ಸಹಯೋಗದೊಡನೆ ಬೆಳಗಿನ ಉಪಾಹಾರವನ್ನೂ ವಿತರಿಸಲಾಗುತ್ತಿದೆ. ಬೆಂಗಳೂರಿನ ಅದಮ್ಯಚೇತನದ ಅಡುಗೆಮನೆಯು ಪರಿಸರಸ್ನೇಹಿ ಇಂಧನವನ್ನು ಬಳಸುವುದಲ್ಲದೆ, ಶೂನ್ಯತ್ಯಾಜ್ಯ ವ್ಯವಸ್ಥೆ ಹೊಂದಿರುವುದೊಂದು ವಿಶೇಷ.

ಪುಟ 8 ರಲ್ಲಿ ಮುಂದುವರಿದಿದೆ

### ಅಭಿನಂದನೆ



ಪಿ.ವಿ. ಕೃಷ್ಣಭಟ್ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ

ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರೂ ಹೆಸರಾಂತ ಶಿಕ್ಷಣವೇತ್ತರೂ ಸೇವಾಧುರೀಣರೂ ಆಗಿರುವ ಶ್ರೀ ಪಿ.ವಿ. ಕೃಷ್ಣಭಟ್ ಅವರಿಗೆ ಈ ಸಾಲಿನಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸಂದಿರುವುದು ಅತ್ಯಂತ ಸಂತೋಷದ ಸಂಗತಿ.

"ಪ್ರೊ. ಪಿ. ವಿ. ಕೃಷ್ಣಭಟ್ ಅವರ ಶಿಕ್ಷಣಸೇವೆ ಅನನ್ಯ. ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಕುವೆಂಪು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ, ನ್ಯಾಕ್ ಮತ್ತು ಇಗ್ನೋ ಗಳಲ್ಲಿ ಕಾರ್ಯಕಾರಿ ಸದಸ್ಯರಾಗಿ, ಸೆಂಟರ್ ಫಾರ್ ಎಜುಕೇಶನ್ ಅಂಡ್ ಸೋಷಿಯಲ್ ಸ್ಟಡೀಸ್ ನ ಅಧ್ಯಕ್ಷರಾಗಿ , ವಿಧಾನಪರಿಷತ್ ಸದಸ್ಯರಾಗಿ, ಕೇಂದ್ರೀಯ ವಿದ್ಯಾಲಯ ಒರಿಸ್ಸಾದಲ್ಲಿ ಚಾನ್ಸಲರ್ ಆಗಿ ಸೇವೆ ಸಲ್ಲಿಸಿರುತ್ತಾರೆ" ಎಂದು ಶ್ರೀಯುತರ ಸೇವೆಯನ್ನು ಗೌರವಪೂರ್ವಕವಾಗಿ ಸ್ಮರಿಸಿರುವ ಕರ್ನಾಟಕ ಸರ್ಕಾರವು ೨೦೨೧ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಶ್ರೀ ಪಿ.ವಿ. ಕೃಷ್ಣಭಟ್ ಅವರಿಗೆ ಅನಂತಕುಮಾರ್ ಪ್ರತಿಷ್ಠಾನ, ಅದಮ್ಯ ಚೇತನ ಮತ್ತು ಅವರ ಅಪಾರ ಶಿಷ್ಯವೃಂದ ಹಾಗೂ ಅಭಿಮಾನಿಗಳ ಪರವಾಗಿ ಅನಂತಪಥವು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಸಮಾಜಸೇವೆ ಮತ್ತು ಶಿಕ್ಷಣಕ್ಷೇತ್ರದಲ್ಲಿ ಶ್ರೀಯುತರ ಮಾರ್ಗದರ್ಶನ ಹೀಗೆಯೇ ನಿರಂತರವಾಗಿ ಲಭ್ಯವಾಗುತ್ತಿರಲೆಂಬುದು ನಮ್ಮೆಲ್ಲರ ಆಶಯ.

## ಅಭಿವೃದ್ಧಿಪರ ರಾಜಕೀಯ ಮತ್ತು ರಾಷ್ಟ್ರ ನಿರ್ಮಾಣ

ಶ್ರೀ ನಿತಿನ್ ಗಡ್ಕರಿ
ರಸ್ತೆ ಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವರು, ಭಾರತ ಸರ್ಕಾರ

ರಾಜಕಾರಣವೆಂದರೇನು ಎಂದು ಅನೇಕ ಯುವಕರು ನಮ್ಮನ್ನು ಕೇಳುತ್ತಾರೆ. ರಾಜಕಾರಣ ಎಂದರೆ ಅಧಿಕಾರ ರಾಜಕಾರಣವಲ್ಲ. ರಾಜಕಾರಣವು ಸಮಾಜೋ-ಆರ್ಥಿಕ ಪರಿವರ್ತನೆಯ ಒಂದು ಉಪಕರಣ. ಸಮಾಜೋ-ಆರ್ಥಿಕ ಪರಿವರ್ತನೆಯ ಅರ್ಥ, ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದವರ ಜೀವನದಲ್ಲಿ ಬದಲಾವಣೆ ತರುವುದು. ಅನೇಕರು ಅಧಿಕಾರವೇ ರಾಜಕಾರಣದ ಗುರಿ ಎಂದು ತಪ್ಪಾಗಿ ಭಾವಿಸುತ್ತಾರೆ. ಆದರೆ ರಾಷ್ಟ್ರದ ಪುನರ್ನಿರ್ಮಾಣವೇ ನಿಜವಾದ ರಾಜಕಾರಣ. ಒಂದು ರೀತಿಯಿಂದ ಇದನ್ನು ರಾಜಕಾರಣ ಎನ್ನುವುದಕ್ಕಿಂತ ಹೆಚ್ಚಾಗಿ, ರಾಷ್ಟ್ರಕಾರಣ, ಸಮಾಜಕಾರಣ ಮತ್ತು ವಿಕಾಸ ಕಾರಣ ಎಂದು ಹೇಳುವುದು ಸೂಕ್ತ.

ರಾಜಕಾರಣದಲ್ಲಿ ಪ್ರತಿಯೊಬ್ಬ ಕಾರ್ಯಕರ್ತನೂ ಸಾಮಾಜಿಕ ಪ್ರಜ್ಞೆ, ಸಾಮಾಜಿಕ ಜವಾಬ್ದಾರಿ ಮತ್ತು ಸಾಮಾಜಿಕ ಅರಿವನ್ನು ಹೊಂದಿರಬೇಕು. ಇವುಗಳನ್ನು ಹೊಂದಿದವನಲ್ಲಿ ಸಾಮಾಜಿಕ ಸಂವೇದನೆ ಇರುತ್ತದೆ. ಈ ಸಾಮಾಜಿಕ ಸಂವೇದನೆ ಇಲ್ಲದಿದ್ದರೆ ರಾಜಕಾರಣದಲ್ಲಿ ಕೆಲಸ ಮಾಡುವುದು ಸಾಧ್ಯವಿಲ್ಲ. ದೇಶಕ್ಕಾಗಿ, ಸಮಾಜಕ್ಕಾಗಿ, ಬಡಜನರಿಗಾಗಿ ಕೆಲಸ ಮಾಡುವುದೇ ರಾಜಕಾರಣದ ನಿಜವಾದ ಅರ್ಥ.

“ಯಾರು ಸಮಾಜದ ಅಂತಿಮ ಸಾಲಿನಲ್ಲಿರುತ್ತಾರೋ, ಯಾರು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಿರುತ್ತಾರೋ ಅಂತಹ ಕೊಟ್ಟ ಕೊನೆಯ ದರಿದ್ರ ನಾರಾಯಣನೇ ನಮಗೆ ದೇವರು. ಅವನ ಸೇವೆಯನ್ನು ನಿರಂತರವಾಗಿ ಮಾಡುತ್ತಿರಬೇಕು. ಯಾವ ದಿನ ಆ ವ್ಯಕ್ತಿಗೆ ಅಶನ, ವಸನ, ವಸತಿ ದೊರೆಯುತ್ತದೆಯೋ ಅವನಿಗೆ ಸುಸ್ಥಿರವಾದ ಬದುಕು ಸಾಧ್ಯವಾಗುತ್ತದೆಯೋ ಅದೇ ದಿನ ನಮ್ಮ ಕೆಲಸ ಸಂಪೂರ್ಣವಾಗುತ್ತದೆ ಎಂದು ನಾವು ಭಾವಿಸುತ್ತೇವೆ” ಹೀಗೆಂದು ರಾಜಕಾರಣದ ಉದ್ದೇಶವನ್ನು ನಿರೂಪಿಸಿದವರು ಪಂಡಿತ್ ದೀನ ದಯಾಳ ಉಪಾಧ್ಯಾಯರು.

ವಿತ್ತ ಮತ್ತು ವ್ಯಕ್ತಿಗಳ ನಡುವೆ ವ್ಯಕ್ತಿ ಶ್ರೇಷ್ಠ, ವ್ಯಕ್ತಿ ಮತ್ತು ಸಂಘಟನೆಗಳ ನಡುವೆ ಸಂಘಟನೆ ಶ್ರೇಷ್ಠ ಮತ್ತು ಸಂಘಟನೆ ಹಾಗೂ ವಿಚಾರಧಾರೆಗಳ ನಡುವೆ ವಿಚಾರಧಾರೆ ಶ್ರೇಷ್ಠ. ರಾಷ್ಟ್ರ ಪುನರ್ನಿರ್ಮಾಣದ ಕೆಲಸ ಮಾಡುವುದು ನಮ್ಮ ವಿಚಾರಧಾರೆ. ನಮ್ಮ ದೇಶವನ್ನು ಸುಖೀ, ಸಮೃದ್ಧ ಮತ್ತು ಶಕ್ತಿಶಾಲಿ ರಾಷ್ಟ್ರವನ್ನಾಗಿ ಮಾಡಬೇಕು, ರೈತರು, ಕಾರ್ಮಿಕರು, ಜನಸಾಮಾನ್ಯರಿಗೆ

ಪುಟ 4 ರಲ್ಲಿ ಮುಂದುವರಿದಿದೆ

# ಕನ್ನಡದ ಅನರ್ಘ್ಯ ರತ್ನ – ಅನಂತಕುಮಾರ್

ಕೆ. ಜನಾರ್ದನ ತುಂಗ



"1980ರ ದಶಕದಲ್ಲಿ ಗೋಕಾಕ್ ಚಳವಳಿ ಮತ್ತು ಸರೋಜಿನಿ ಮಹಿಷಿ ವರದಿ ಜಾರಿಗಾಗಿ ನಡೆದ ಚಳವಳಿಯ ಕಾಲ. ಬೆಂಗಳೂರಿನ ಏಜೀಸ್ ಆಫೀಸಿನಲ್ಲಿ ನಡೆಯುತ್ತಿದ್ದ ಸಿಬ್ಬಂದಿ ಆಯ್ಕೆ ಪಟ್ಟಿಯಲ್ಲಿ ತಮಿಳು ಹೆಸರುಗಳೇ ಕಾಣಿಸುತ್ತಿದ್ದವು. ಇದನ್ನು ಪ್ರತಿಭಟಿಸಿ ನಾವು 'ಏಜೀಸ್ ಆಫೀಸ್ ಕನ್ನಡ ಸಂಘ'ದ ಮೂಲಕ ಹೋರಾಡುತ್ತಿದ್ದೆವು. ಆಗ ನಮ್ಮ ಪರವಾಗಿ ಕನ್ನಡದ ವರನಟ ಡಾ. ರಾಜಕುಮಾರರು ಅಡ್ವಾನಿಯವರಿಗೆ ಒಂದು ಪತ್ರ ಬರೆದು ನಮಗೆ ಕೊಟ್ಟಿದ್ದರು. ಅದನ್ನು ನಾವು ಅಡ್ವಾನಿಯವರ ಕೈಯಲ್ಲಿರಿಸಿದಾಗ ಕನ್ನಡದಲ್ಲಿದ್ದ ಆ ಪತ್ರವನ್ನು ಅವರು ಗಟ್ಟಿಯಾಗಿ ಓದಲು ತೊಡಗಿದರು. ಆಶ್ಚರ್ಯಚಕಿತರಾದ ನಮ್ಮನ್ನು ನೋಡಿ ಅಡ್ವಾನಿಯವರು, 'ನಾನು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಬೆಂಗಳೂರಿನ ಜೈಲಿನಲ್ಲಿ ಬಂದಿಯಾಗಿದ್ದಾಗ ನನ್ನ ಜೊತೆಯಿದ್ದ ಅನಂತಕುಮಾರ್ ನನಗೆ ಕನ್ನಡ ಕಲಿಸಿದರು, ನನ್ನಿಂದ ಅವರು ಸಿಂಧಿ ಭಾಷೆ ಕಲಿತರು'" ಎಂದಿದ್ದರು".

ಹೀಗೆಂದು ಡಾ. ರಾಜ್, ಅಡ್ವಾನಿ ಮತ್ತು ಅನಂತಕುಮಾರರನ್ನು ಒಟ್ಟಿಗೆ ನೆನಪಿಸಿಕೊಂಡವರು ಪ್ರಸಿದ್ಧ ನಗೆಗಾರ, ಬಹುಮುಖ ಪ್ರತಿಭೆಯ ರಿಚರ್ಡ್ ಲೂಯಿಸ್. ಅಡ್ವಾನಿಯವರಿಗೇ ಕನ್ನಡ ಕಲಿಸುವಷ್ಟು ಅಭಿಮಾನಿಯಾಗಿದ್ದ ಅನಂತಕುಮಾರ್ ಕರ್ನಾಟಕದ ಜನಪ್ರಿಯ ರಾಜಕಾರಣಿಯಾದರು. ಸಿಂಧಿ ಭಾಷೆಯನ್ನು ಕಲಿಯುವ ವಿಶಾಲ ಮನೋಭಾವ ಹೊಂದಿದ ಅವರು ರಾಷ್ಟ್ರ ರಾಜಕಾರಣದಲ್ಲಿಯೂ ಮಿಂಚಿದರು. ಅನಂತಕುಮಾರ್ ಅವರ ಕನ್ನಡದ ಬಗೆಗಿನ ನಿಲುವಿಗೆ ಈ ಘಟನೆ ಸಾಕ್ಷಿಯಾಗಿದೆ.

ದಾಖಲೆಯ ಆರು ಬಾರಿ ಲೋಕಸಭಾ ಸದಸ್ಯರಾಗಿ ಮತ್ತು ಒಂಭತ್ತು ಖಾತೆಗಳ ಮಂತ್ರಿಯಾಗಿ ಕನ್ನಡದಲ್ಲಿಯೇ ಪ್ರಮಾಣ ವಚನ ಸ್ವೀಕರಿಸಿದ್ದರು, ಅನಂತಕುಮಾರ್.ಅವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ಮಾತನಾಡುವಾಗಲೂ ಕನ್ನಡದಲ್ಲಿಯೇ ತನ್ನನ್ನು ಪರಿಚಯಿಸಿಕೊಂಡು ಇಡೀ ಜಗತ್ತಿನ ಗಮನವನ್ನು ಕನ್ನಡದ ಕಡೆಗೆ ಸೆಳೆದರು.

ಅನಂತಕುಮಾರರ ಕನ್ನಡಾಭಿಮಾನ ತೋರಿಕೆಯದಾಗಿರಲಿಲ್ಲ. ಅವರ ಖಾಸಗಿ ಸಂಗ್ರಹದಲ್ಲಿರುವ ಕನ್ನಡ ಪುಸ್ತಕಗಳನ್ನು ಗಮನಿಸಿದರೆ ಇದು ತಿಳಿಯುತ್ತದೆ. ಕನ್ನಡ ಸಾಹಿತ್ಯದಲ್ಲಿ ರಚಿತವಾಗಿರುವ ಎಲ್ಲ ವಿಷಯಗಳನ್ನು ಕುರಿತ ಪುಸ್ತಕಗಳೂ ಅವರ ಸಂಗ್ರಹದಲ್ಲಿದ್ದವು ಮಾತ್ರವಲ್ಲ, ಅವರು ಅವೆಲ್ಲವನ್ನೂ ಓದಿದ್ದರು. ಸಾಹಿತ್ಯಕ್ಕೆ ಸಂಬಂಧಿಸಿದ ಸಭೆಗಳಲ್ಲಿ ರಾಜಕೀಯದ ಸೋಂಕೇ ಇಲ್ಲದೆ ಕನ್ನಡ ಸಾಹಿತ್ಯದ ಬಗ್ಗೆಯೇ ನಿರರ್ಗಳವಾಗಿ ಮಾತನಾಡುತ್ತಿದ್ದರು. 'ಹೋತಾನಂದ' ಎಂಬ ಕಾವ್ಯನಾಮದಲ್ಲಿ ಚುಟುಕಗಳನ್ನೂ ಕವನಗಳನ್ನೂ ರಚಿಸುತ್ತಿದ್ದರು ಎಂದು ಅವರ ಸ್ನೇಹಿತರು ನೆನಪಿಸಿಕೊಳ್ಳುತ್ತಿದ್ದರು.

ಭಾರತೀಯ ಭಾಷೆಗಳ ಸಾಲಿನಲ್ಲಿ ಕನ್ನಡಕ್ಕೆ ಅಗ್ರಗಣ್ಯ ಸ್ಥಾನವನ್ನು ಕಲ್ಪಿಸಲು ಅನಂತಕುಮಾರರು ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಿದರು.

ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಕೊಡಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು ಕರ್ನಾಟಕದ ಅನೇಕ ನಗರಗಳಲ್ಲಿ ಧರಣಿ, ಚಳುವಳಿ ಪ್ರಾರಂಭವಾಗಿತ್ತು. ಇದನ್ನು ಪತ್ರಿಕೆಗಳ ಮೂಲಕ ಗಮನಿಸಿದ ಅನಂತಕುಮಾರರು ನಾರಾಯಣ ಕುಮಾರ್ ಅವರಿಗೆ ಕರೆಮಾಡಿ "ಹೀಗೆ ಕರ್ನಾಟಕದ ನಗರಗಳಲ್ಲಿ ಚಳುವಳಿ ಮಾಡುವುದರಿಂದ ಪ್ರಯೋಜನವಿಲ್ಲ, ಕೇಂದ್ರ ಸರಕಾರದ ಕಣ್ಣು ತೆರೆಸಲು ದೆಹಲಿಯಲ್ಲಿಯೂ ಪ್ರತಿಭಟನೆ ಮಾಡಬೇಕು" ಎಂದು ಸೂಚಿಸಿದರು. ಅಷ್ಟೇ ಅಲ್ಲದೆ ಸಾವಿರಾರು ಕನ್ನಡಿಗರ ದೆಹಲಿ ಪ್ರಯಾಣ ಮತ್ತು ಜಂತರ್ ಮಂತರ್ ನಲ್ಲಿ ಭಾರೀ ಸಭೆಯೊಂದರ ಏರ್ಪಾಟನ್ನೂ ಮಾಡಿದರು. ಸಭೆಗೆ ಅನೇಕ ಸಂಸತ್ಸದಸ್ಯರನ್ನೂ ಕರೆದು ತಂದರು. ಚಳುವಳಿಯ ನಾಯಕರನ್ನು ಸಂಬಂಧಿಸಿದ ಮಂತ್ರಿಗಳ ಬಳಿ ಕರೆದೊಯ್ದರು. ಪ್ರಧಾನ ಮಂತ್ರಿಗಳ ಜೊತೆಗೂ ಅವರ ಭೇಟಿಯನ್ನು ಏರ್ಪಡಿಸಿದರು. ಈ ರೀತಿಯಾಗಿ ದಿಕ್ಕು ದೆಸೆಯಿಲ್ಲದೆ ನಡೆಯುತ್ತಿದ್ದ ಚಳುವಳಿಯೊಂದಕ್ಕೆ ಸೂಕ್ತ ಮಾರ್ಗದರ್ಶನ ನೀಡಿ ಕನ್ನಡಕ್ಕೆ ರಾಷ್ಟ್ರೀಯ ಭಾಷೆಯ ಸ್ಥಾನಮಾನವನ್ನು ಕೊಡಿಸಲು ಅನಂತಕುಮಾರ್ ಯಶಸ್ವಿಯಾದರು.

ಇಂದು ಬ್ಯಾಂಕಿಂಗ್ ಸೇವೆಯ ನೇಮಕಾತಿ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಬರೆಯುವ ಅವಕಾಶವಿದೆ. ಇದು ಸಾಧ್ಯವಾಗಿರುವುದೂ ಅನಂತಕುಮಾರರ ಪ್ರಯತ್ನದಿಂದಲೇ. ಇದಕ್ಕಾಗಿ ಅವರು ಅಂದಿನ ಹಣಕಾಸು ಸಚಿವ ಶ್ರೀ ಅರುಣ್ ಜೈಟ್ಲಿಯವರನ್ನು ಭೇಟಿಯಾಗಿ ಅವರ ಮನವೊಲಿಸಿದ್ದರು. ಅವರು ಕನ್ನಡದ ಹೆಮ್ಮೆಯ ಬ್ಯಾಂಕ್ ಆಗಿದ್ದ ವಿಜಯಾ ಬ್ಯಾಂಕಿನ ಕಾರ್ಮಿಕ ಸಂಘವೊಂದರ ಗೌರವಾಧ್ಯಕ್ಷರೂ ಆಗಿದ್ದರು ಎಂಬುದು ಸ್ಮರಣೀಯ. ಈ ಕಾರ್ಮಿಕ ಸಂಘವು ಏರ್ಪಡಿಸಿದ್ದ ಬೃಹತ್ ಸಭೆಯೊಂದರಲ್ಲಿ ಬ್ಯಾಂಕ್ ಅಧಿಕಾರಿಗಳು ಕನ್ನಡದಲ್ಲಿ ವ್ಯವಹರಿಸುವ ಅಗತ್ಯ ಮತ್ತು ಅನಿವಾರ್ಯತೆಗಳನ್ನು ವಿವರಿಸಿ ಬ್ಯಾಂಕಿನ ಹಿರಿಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು.

ಕನ್ನಡದ ವಿಷಯಕ್ಕಾಗಿ ದೆಹಲಿಗೆ ಬರುವ ಎಲ್ಲ ನಿಯೋಗಗಳಿಗೂ ಅನಂತಕುಮಾರರೇ ಅತಿಥ್ಯ ನೀಡುತ್ತಿದ್ದರು. ಹೊರನಾಡು ಕನ್ನಡಿಗರು, ಸಾಹಿತ್ಯ ಪರಿಷತ್ತಿನ ಅನುದಾನ, ಸಾಂಸ್ಕೃತಿಕ ಕಟ್ಟಡಗಳಿಗೆ ಅನುದಾನ, ಶಾಸ್ತ್ರೀಯ ಸ್ಥಾನಮಾನ, ಕನ್ನಡ ನೆಲ ಜಲದ ಸಂರಕ್ಷಣೆ ಮುಂತಾದ ಹತ್ತು ಹಲವು ಬೇಡಿಕೆಗಳನ್ನು ಮುಂದಿರಿಸಿಕೊಂಡು ಬರುವವರಿಗೆ ತಮ್ಮ ದೆಹಲಿ ಮನೆಯಲ್ಲಿ ವಸತಿಯ ಅನುಕೂಲ ಮಾಡಿಕೊಡುವುದಲ್ಲದೆ ಅವರನ್ನು ಸಂಬಂಧಿಸಿದ ಇಲಾಖೆಗಳಿಗೆ ಖುದ್ದಾಗಿ ಕರೆದೊಯ್ಯುತ್ತಿದ್ದರು, ಮಂತ್ರಿಗಳ ಜೊತೆಗೆ ಭೇಟಿಯನ್ನೂ ಏರ್ಪಡಿಸುತ್ತಿದ್ದರು.

ಅರಮನೆ ಮೈದಾನದಲ್ಲಿ ನಡೆದ ವಿಶ್ವ ಕನ್ನಡಿಗರ ಜಾಗೃತಿ ಸಮ್ಮೇಳನಕ್ಕೆ ಸಂಪೂರ್ಣ ಮಾರ್ಗದರ್ಶನ ನೀಡಿದವರು ಅನಂತಕುಮಾರ್ ಎಂದು ನಾರಾಯಣ ಕುಮಾರ್‌ನೆನಪಿಸಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ 42ದೇಶಗಳ ಕನ್ನಡ ಸಂಘಗಳನ್ನು ಖುದ್ದಾಗಿ ಸಂಪರ್ಕಿಸಿ ಅವರೆಲ್ಲರೂ ಸಮ್ಮೇಳನದಲ್ಲಿ ಭಾಗವಹಿಸುವಂತೆ ಮಾಡಿದ್ದರು. ಕನ್ನಡದ ವಿಷಯದಲ್ಲಿ ಅನಂತಕುಮಾರರ ಸಂಪರ್ಕ ಜಾಲ ಎಷ್ಟು ವಿಶಾಲವಾಗಿತ್ತು ಎಂಬುದನ್ನೂ ಇದು ಸೂಚಿಸುತ್ತದೆ.



ಕನ್ನಡದ ಬೆಳವಣಿಗೆಗೆ ನಿರ್ದಿಷ್ಟವಾದ ಕಾರ್ಯತಂತ್ರವು ಅವರ ಕಲ್ಪನೆಯಲ್ಲಿತ್ತು. ತಂತ್ರಜ್ಞಾನದಲ್ಲಿಯೂ ಕನ್ನಡದ ಬಳಕೆಯ ವಿಚಾರದಲ್ಲಿ ಅವರು ಅತೀವ ಆಸ್ಥೆಯನ್ನು ಹೊಂದಿದ್ದರು. ತಂತ್ರಜ್ಞಾನದಲ್ಲಿ ಕನ್ನಡವನ್ನು ಸರಳವಾಗಿ ಬಳಸುವಂತೆ ಯೂನಿಕೋಡ್ ನಿರ್ಮಾಣಕ್ಕೆ ಅವರು ಧನ ಸಹಾಯ ಮಾಡಿದ್ದರು. ಪುಸ್ತಕ ಪರಿಷೆಗಳನ್ನು ಏರ್ಪಡಿಸಿ ಸಾವಿರಾರು ಪುಸ್ತಕಗಳನ್ನು ಓದುಗರಿಗೆ ವಿತರಿಸಿದ್ದರು. ಕನ್ನಡ ಶಾಲೆಗಳ ಕಟ್ಟಡ ನಿರ್ಮಾಣ ಮತ್ತು ಶೌಚಾಲಯ ವ್ಯವಸ್ಥೆಗಳಿಗೆ ಸಂಸದರ ನಿಧಿಯಿಂದ ಆದ್ಯತೆಯ ಮೇರೆಗೆ ಅನುದಾನ ನೀಡುತ್ತಿದ್ದರು. ಅದೇ ರೀತಿ, ಕನ್ನಡ ಸಂಸ್ಕೃತಿಯ ಆಧಾರ ಸ್ತಂಭಗಳಾಗಿರುವ ಭಜನಾ ಮಂದಿರಗಳು, ದೇವಾಲಯಗಳು, ಸಮುದಾಯ ಭವನಗಳು, ವಾಚನಾಲಯಗಳು, ಗ್ರಂಥಾಲಯಗಳ ನಿರ್ಮಾಣಕ್ಕೆ ಧಾರಾಳವಾಗಿ ಧನ ಸಹಾಯ ಮಾಡಿ ಪ್ರೋತ್ಸಾಹಿಸಿದ್ದರು. ಕನ್ನಡ ಸಂಸ್ಕೃತಿಯ ಎಲ್ಲ ಪರಿಷೆಗಳಲ್ಲಿ, ಉತ್ಸವಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದರು. ಬೆಂಗಳೂರು ವಿಧಾನ ಸಭಾ ಕ್ಷೇತ್ರಗಳ ಮಟ್ಟದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ಅವರು ಪ್ರೋತ್ಸಾಹ ನೀಡಿದರು.

ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡಬಲ್ಲ ಅನಂತಕುಮಾರರು ಕನ್ನಡದಲ್ಲಿ ಮಾತನಾಡುವಾಗ ಇಂಗ್ಲಿಷ್ ಬಳಕೆಯನ್ನು ಇಷ್ಟ ಪಡುತ್ತಿರಲಿಲ್ಲ. ಶುದ್ಧ ಕನ್ನಡದಲ್ಲಿ ಮಾತನಾಡುವುದನ್ನು ಪ್ರೋತ್ಸಾಹಿಸುವ ಸಲುವಾಗಿ ಅವರು ಅನೇಕ ಸ್ಪರ್ಧೆಗಳನ್ನು ಆಯೋಜಿಸುತ್ತಿದ್ದರು. 2013-14 ರ ಒಂದೇ ವರ್ಷದ ಅವಧಿಯಲ್ಲಿ ನಡೆಸಿದ ಸ್ಪರ್ಧೆಗಳಲ್ಲಿ ಹತ್ತು ಸಾವಿರಕ್ಕೂ ಅಧಿಕ ಜನರು ಭಾಗವಹಿಸಿದ್ದರು!


ರಾಜಕೀಯದಲ್ಲಿ ಘೋಷಣೆಗಳಿಗೆ ಮಹತ್ವ. ಅನಂತಕುಮಾರರು ಹೊಸ ಹೊಸ ಘೋಷಣೆಗಳನ್ನು ಹೊಸೆಯುವುದರಲ್ಲಿಯೂ ನಿಷ್ಣಾತರು. ದೇಶ ಮೊದಲು, ಭಾರತ ಗೆಲ್ಲಿಸಿ, ದೇಶಕ್ಕಾಗಿ ನಿಮ್ಮ ಮತ, ಅನ್ನ-ಅಕ್ಷರ-ಆರೋಗ್ಯ ಮುಂತಾದ ಹಲವು ಘೋಷಣೆ, ಧ್ಯೇಯ ವಾಕ್ಯಗಳನ್ನು ಅವರು ರಚಿಸಿದ್ದರು.

ಒಮ್ಮೆ ಕನ್ನಡದ ವಯೋವೃದ್ಧ ಸಾಹಿತಿಯೊಬ್ಬರು ಕನ್ನಡಕ್ಕೆ ಶಾಸ್ತ್ರೀಯ ಸ್ಥಾನವನ್ನು ಆಗ್ರಹಿಸಿ ಉಪವಾಸ ಮುಷ್ಕರ ಪ್ರಾರಂಭಿಸಿದ್ದರು. ಅವರನ್ನು ಅನಂತಕುಮಾರರು ಭೇಟಿಯಾಗಲು ಬಯಸಿದಾಗ ರಾಜಕಾರಣಿಯೊಂದಿಗೆ

ಪುಟ 7 ರಲ್ಲಿ ಮುಂದುವರೆದಿದೆ

# ಔಷಧ ರಹಿತ ಜೀವನ

ಡಾ. ಸಿ ಎನ್. ಕೃಷ್ಣ ಗುರೂಜಿ
ಅಧ್ಯಕ್ಷರು, ಓಂ ಸೇವಾ ಕೇಂದ್ರ, ಬೆಂಗಳೂರು



ಜೀವನವನ್ನು ನಡೆಸಲು ಔಷಧದ ಅವಶ್ಯಕತೆ ಏಕಿಲ್ಲ ಎನ್ನುವುದಕ್ಕೆ ಮೊದಲು, ಔಷಧ ಏಕೆ ಬೇಕು ಎನ್ನುವ ಪ್ರಶ್ನೆಯನ್ನು ನಾವು ಮೂಲಭೂತವಾಗಿ ಕೇಳಿಕೊಳ್ಳಬೇಕಾಗುತ್ತದೆ. ಮನುಷ್ಯನಿಗೆ ಕಾಯಿಲೆ ಬಂದಾಗ ಔಷಧದ ಅವಶ್ಯಕತೆ ಇದೆ. ಜೀವನವನ್ನು ಅರ್ಥ ಮಾಡಿಕೊಳ್ಳಲು ಅದನ್ನು ನಾವು ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ, ಆರ್ಥಿಕ ಆರೋಗ್ಯ, ಸಾಂಸಾರಿಕ ಆರೋಗ್ಯ, ಸಾಮಾಜಿಕ ಆರೋಗ್ಯ ಎಂದು ಐದು ವಿಭಾಗವಾಗಿ ಮಾಡಿಕೊಳ್ಳಬಹುದು. ಹೀಗೆ ಮಾಡಿಕೊಂಡರೆ ದೈಹಿಕ ಮತ್ತು ಮಾನಸಿಕ ಆರೋಗ್ಯಗಳಿಗೆ ಮಾತ್ರ ಔಷಧದ ಅವಶ್ಯಕತೆ ಇದೆ. ನೀವು ಭೇಟಿಯಾಗುವ ಯಾವುದೇ ವ್ಯಕ್ತಿಯನ್ನು ಕೇಳಿದರೂ "ನನಗಿಂತ ನನ್ನ ಹಿರಿಯರು, ನನ್ನ ತಂದೆ ಹೆಚ್ಚು ಆರೋಗ್ಯವಂತರಾಗಿದ್ದರು" ಎಂಬಂತಹ ಉತ್ತರಗಳನ್ನು ಪಡೆಯುತ್ತೀರಿ.

ನಮ್ಮ ಜೀವನಶೈಲಿಯಲ್ಲಿ ಮಾಡಿಕೊಂಡಿರುವ ಬದಲಾವಣೆಯೇ ಇದಕ್ಕೆ ಕಾರಣ ಎಂಬುದು ಸುವಿದಿತ. ನಾವು ಪ್ರಕೃತಿಯಿಂದ ವಿಮುಖರಾಗುತ್ತಿದ್ದೇವೆ. ಯಂತ್ರಗಳನ್ನು ಬಳಸುತ್ತ ನಾವೇ ಒಂದು ಯಂತ್ರವಾಗಿ ಜೀವನವನ್ನು ನಡೆಸುತ್ತಿದ್ದೇವೆ. ಕ್ರಮಬದ್ಧವಾದ ಜೀವನವನ್ನು ನಾವು ನಡೆಸುತ್ತಿಲ್ಲ. ಎಲ್ಲವೂ ಧಿಡೀರನೆ ಆಗಬೇಕೆಂಬ ನಿರೀಕ್ಷೆಯಿಂದ ಆರೋಗ್ಯವೂ ಕೂಡಲೇ ಸುಧಾರಿಸಬೇಕೆಂದು ನಾವು ನಿರೀಕ್ಷೆ ಮಾಡುತ್ತೇವೆ. ಹಿಂದಿನ ಕಾಲದಲ್ಲಿ ಯಾವುದಾದರೂ ಒಂದು ಸಮಸ್ಯೆ ಬಂದರೆ ಅದಕ್ಕೆ ಪರಿಹಾರವನ್ನು ಕೇಳಿಕೊಂಡು ಅದೇ ಊರಿನಲ್ಲಿರುವ ಪಂಡಿತರ ಹತ್ತಿರ ಹೋಗುತ್ತಿದ್ದರು. ಆ ಪಂಡಿತರು ನಾಡಿ ಶಾಸ್ತ್ರ, ಮುಖದ ಭಾವನೆಗಳು, ಹಸ್ತರೇಖೆಗಳು ಮುಂತಾದವುಗಳನ್ನು ನೋಡುವ ಮೂಲಕ ತಮ್ಮದೇ ಆದ ಒಂದು ನೈಸರ್ಗಿಕ ಕ್ರಮವನ್ನು ಅನುಸರಿಸಿ ಕಾಯಿಲೆಯನ್ನು ಗುರುತಿಸಿ ಅದಕ್ಕೆ ನಾರು, ಬೇರು, ಯಂತ್ರ, ಮಂತ್ರ ತಂತ್ರಗಳ ಮೂಲಕ ಸಾಧ್ಯವಾದ ಮಟ್ಟಿಗೆ ಕಾಯಿಲೆಗಳನ್ನು ವಾಸಿ ಮಾಡುತ್ತಿದ್ದರು. ಆಯುರ್ವೇದಕ್ಕೆ ಸಂಬಂಧಿಸಿದ ಗಿಡಮೂಲಿಕೆಗಳನ್ನು ಬಳಸುತ್ತಿದ್ದರು. ಕಾಯಿಲೆ ವಾಸಿಯಾಗಲು ಕಾಲ ಬೇಕಾಗುತ್ತಿತ್ತು.

ಇಂದು ಜನರಿಗೆ ವೈದ್ಯರೊಂದಿಗೆ ಆಪ್ತಸಮಾಲೋಚನೆ ಮಾಡುವ ವ್ಯವಧಾನವಿಲ್ಲ. ಗೂಗಲ್ ನಲ್ಲಿ ಹುಡುಕಿ ತಮ್ಮ ಸಮಸ್ಯೆಗೆ ಇದೇ ಔಷಧ ಎಂದು ನಿರ್ಧರಿಸಿ ನೇರವಾಗಿ ಔಷಧದ ಅಂಗಡಿಗೆ ಹೋಗಿ ಔಷಧ ಖರೀದಿಸುತ್ತಾರೆ. ಹೊಟ್ಟೆಯಲ್ಲಿ ಉರಿ ಕಾಣಿಸಿಕೊಂಡರೆ ಅದಕ್ಕೆ ಗ್ಯಾಸ್ಟ್ರಿಕ್ ಕಾರಣ ಎಂದು ಅವರೇ ತೀರ್ಮಾನ ತೆಗೆದುಕೊಳ್ಳುತ್ತಾರೆ. ತಾವೇ ಪರಿಣಿತರು ಎಂದು ಭಾವಿಸಿಕೊಂಡು ಸ್ವಯಂಚಿಕಿತ್ಸೆ ಮಾಡಿಕೊಳ್ಳುವ ಪ್ರವೃತ್ತಿಯನ್ನು ನಾವು ನೋಡುತ್ತಿದ್ದೇವೆ.

ನಾವು ಪ್ರಕೃತಿಯಿಂದ ದೂರವಾಗುವುದು ಸಾಧ್ಯವೇ ಇಲ್ಲ. ಉದಾಹರಣೆಗೆ, ನಮಗೆ ಹಿಂದೆ ಟೂಥ್ ಪೇಸ್ಟ್ ಪರಿಚಯವೇ ಇರಲಿಲ್ಲ. ಬೆರಳಲ್ಲಿ ಹಲ್ಲುಪುಡಿ, ಇದ್ದಿಲು, ಬೆರಣಿ ಪುಡಿ ಬಳಸಿಕೊಂಡು ಹಲ್ಲುಜ್ಜುತ್ತಿದ್ದೆವು. ನಂತರ ಟೂಥ್ ಪೇಸ್ಟ್ ಬಳಸತೊಡಗಿದೆವು. ಇದೀಗ ಮತ್ತೆ ನಿಮ್ಮ ಟೂಥ್ ಪೇಸ್ಟಿನಲ್ಲಿ ಲವಂಗ ಇದೆಯೆ, ಉಪ್ಪು ಇದೆಯೆ, ಇದ್ದಿಲು ಇದೆಯೆ ಎಂಬ ಜಾಹೀರಾತುಗಳನ್ನು ಕೇಳತೊಡಗಿದ್ದೇವೆ.

ಕಾಯಿಲೆ ಹೇಗೆ ಬರುತ್ತದೆ? ರೋಗಾಣುಗಳು ಮತ್ತು ರೋಗ ನಿರೋಧಕ ಶಕ್ತಿಯ ನಡುವಣ ಸಂಘರ್ಷದಿಂದ ಕಾಯಿಲೆಗಳು ಬರುತ್ತವೆ. ಯಾವುದೇ ರೋಗಾಣುವು ದೇಹವನ್ನು ಪ್ರವೇಶಿಸಿದಾಗ ದೇಹದಲ್ಲಿರುವ ನಿರ್ನಾಳ ಗ್ರಂಥಿಗಳು ರೋಗನಿರೋಧಕ ಶಕ್ತಿಯನ್ನು ಹುಟ್ಟಿಸುತ್ತವೆ. ಈ ರೋಗಾಣುಗಳ ಜೊತೆ ನಡೆಯುವ ಹೋರಾಟದಲ್ಲಿ ರೋಗ ನಿರೋಧಕ ಶಕ್ತಿ ಗೆದ್ದರೆ ನಾವು ಕಾಯಿಲೆಯಿಂದ ಮುಕ್ತರಾಗುತ್ತೇವೆ. ರೋಗಾಣುಗಳ ಸಂಖ್ಯೆ ಮತ್ತು ಶಕ್ತಿಯೇ ಅಧಿಕವಾದಾಗ ಕಾಯಿಲೆ ಉಂಟಾಗುತ್ತದೆ.

ಕಾಯಿಲೆ ಉಂಟಾದಾಗ ನಾವು ವೈದ್ಯರ ಹತ್ತಿರ ಹೋಗುತ್ತೇವೆ. ಅವರು ಲಕ್ಷಣಗಳನ್ನು ಪರಿಶೀಲಿಸಿ ಔಷಧ ಬರೆದುಕೊಡುತ್ತಾರೆ. ಔಷಧವನ್ನು ಅಂಗಡಿಯಿಂದ ಕೊಂಡು ಸೇವಿಸುತ್ತೇವೆ. ಕಾಯಿಲೆ ವಾಸಿಯಾದರೆ ಅದರ ಶ್ರೇಯಸ್ಸನ್ನು ವೈದ್ಯರಿಗೆ ಅಥವ ಔಷಧಗಳಿಗೆ ಕೊಡುತ್ತೇವೆ. ಆದರೆ ನಮ್ಮ ದೇಹಕ್ಕೆ ಒಂದು ಒಳ್ಳೆಯ ಮಾತನ್ನೂ ಹೇಳುವುದಿಲ್ಲ.

ಔಷಧ ರಹಿತ ಚಿಕಿತ್ಸೆಯು "ದೇಹಕ್ಕೆ ಬೇಕಾದ ಔಷಧದನ್ನು ತಯಾರು ಮಾಡುವ ಶಕ್ತಿ ದೇಹದಲ್ಲಿಯೇ ಇದೆ" ಎಂಬ ತತ್ತ್ವವನ್ನು ಅನುಸರಿಸುತ್ತದೆ. ತಲೆ ನೋವು ಬಂದರೆ ಒಂದು ಮಾತ್ರೆಯನ್ನು ಸೇವಿಸಿ ತಲೆನೋವು ವಾಸಿಯಾಯಿತೆಂದು ಭಾವಿಸಿಕೊಳ್ಳುತ್ತೇವೆ. ಆದರೆ ತಲೆ ನೋವು ವಾಸಿಯಾಗುವುದು ಆ ಮಾತ್ರೆಯಿಂದಲ್ಲ; ಆ ಮಾತ್ರೆಯಲ್ಲಿರುವ ಒಂದು ರಾಸಾಯನಿಕ ಸಂಯುಕ್ತವು ಪಿಟ್ಯುಟರಿ ಗ್ರಂಥಿಗೆ ತಲೆನೋವು ನಿವಾರಣೆಗೆ ಬೇಕಾದ ರಸವನ್ನು ಉತ್ಪಾದನೆ ಮಾಡುವಂತೆ ಪ್ರಚೋದನೆ ನೀಡುತ್ತದೆ. ತಲೆನೋವಿನಿಂದ ಹಿಡಿದು ಕ್ಯಾನ್ಸರಿನಂತಹ ಕಾಯಿಲೆಗಳ ವರೆಗೂ ನಡೆಯುವ ಪ್ರಕ್ರಿಯೆ ಇದೇ. ದೇಹದಲ್ಲಿ ಗಾಯವಾದಾಗಲೂ ಹೊಸ ಚರ್ಮ ಹುಟ್ಟುವುದು ವೈದ್ಯರು ಕೊಟ್ಟ ಔಷಧದಿಂದಲ್ಲ; ಆ ಔಷಧದ ಪ್ರಚೋದನೆಯಿಂದ ನಿರ್ನಾಳ ಗ್ರಂಥಿಗಳು ಹೊಸಚರ್ಮ ಹುಟ್ಟಲು ಪೂರಕವಾದ ರಸಗಳನ್ನು ಸ್ರವಿಸುವುದೇ ಕಾರಣ. ಕಾಯಿಲೆ ವಾಸಿಯಾಗಲು ದೇಹದ ಪಾತ್ರವೇ ಇಲ್ಲದೆ ಔಷಧಗಳಿಂದ ಮಾತ್ರ ವಾಸಿಯಾಗುವಂತಿದ್ದರೆ ಹಣವಂತರು ಯಾರೂ ಸಾಯುತ್ತಿರಲಿಲ್ಲ. ಲಕ್ಷ ರೂಪಾಯಿ ಕೊಟ್ಟಾದರೂ ಮಾತ್ರೆಗಳನ್ನು ಖರೀದಿಸಿ ಕಾಯಿಲೆ ವಾಸಿ ಮಾಡಿಕೊಳ್ಳುತ್ತಿದ್ದರು.

ರಾಸಾಯನಿಕ ಪದಾರ್ಥಗಳ ಕ್ರಿಯೆ, ಪ್ರತಿಕ್ರಿಯೆಗಳನ್ನು ಅನುಭವಿಸುತ್ತ ಅವುಗಳ ಪ್ರಚೋದನೆಯಿಂದ ಕಾಯಿಲೆ ನಿವಾರಣೆಗೆ ಸೂಕ್ತವಾದ ರಸಗಳನ್ನು ಉತ್ಪಾದಿಸುವ ಸಾಮರ್ಥ್ಯ ದೇಹದಲ್ಲಿ ಇರಬೇಕು. ಇದಕ್ಕೊಂದು ಸಣ್ಣ ಉದಾಹರಣೆ: ನಿಮ್ಮ ದೇಹದಲ್ಲಿ ಗಾಯವಾಗಿ ಚರ್ಮ ಕಿತ್ತು ಬಂದಿದ್ದರೆ ಆ ಗಾಯವನ್ನು ಉಪ್ಪು ನೀರಿನಿಂದ ತೊಳೆದು ಹಾಗೆಯೇ ಒಣಗಲು ಬಿಡಿ. ನೀವು ಏನೂ ಮಾಡದಿದ್ದರೂ ಮೂರು ನಾಲ್ಕು ದಿನಗಳಲ್ಲಿ ಗಾಯ ವಾಸಿಯಾಗುತ್ತದೆ. ಗಾಯವಾದಾಗ ಕಾಫಿಪುಡಿ ಹಚ್ಚಿಕೊಳ್ಳುತ್ತೇವೆ, ಅರಿಶಿಣ ಹಚ್ಚಿಕೊಳ್ಳುತ್ತೇವೆ; ಗಾಯ ವಾಸಿಯಾಗುತ್ತದೆ. ಇಲ್ಲಿ 'ವಾಸಿಯಾಗುತ್ತದೆ' ಎಂಬ ನಂಬಿಕೆಯೇ ಅರ್ಧ ಕೆಲಸ ಮಾಡುತ್ತದೆ. ಉಳಿದಂತೆ ಗಾಯವನ್ನು ವಾಸಿ ಮಾಡುವ ಸಾಮರ್ಥ್ಯ ದೇಹದಲ್ಲಿಯೇ ಇರುತ್ತದೆ. ಅಂದರೆ ಔಷಧಗಳನ್ನು ತೆಗೆದುಕೊಳ್ಳಬಾರದೆಂದಲ್ಲ, ತಾತ್ಕಾಲಿಕ ಉಪಶಮನಕ್ಕೆ ಅಥವ ತತ್ಕ್ಷಣದ ಪರಿಹಾರಕ್ಕೆ ಅಲೋಪಥಿ ಔಷಧಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ದೇಹದಲ್ಲಿ ಯಾವ ರಸಗಳ ಉತ್ಪತ್ತಿಯಲ್ಲಿ ವ್ಯತ್ಯಾಸವಾಗುತ್ತಿದೆ ಎಂದು ತಿಳಿದುಕೊಂಡು ಚಿಕಿತ್ಸೆ ನೀಡುವ ಅನೇಕ ಪ್ರಾಕೃತಿಕ ಚಿಕಿತ್ಸಾ ವಿಧಾನಗಳು ನಮ್ಮಲ್ಲಿವೆ. ರೇಖಿ, ಪ್ರಾಣಿಕ್ ಹೀಲಿಂಗ್, ಸಿದ್ಧ ಹೀಲಿಂಗ್, ಆಕ್ಯೂಪ್ರೆಷರ್, ಆಕ್ಯೂ ಪಂಕ್ಚರ್, ಜಲ ಚಿಕಿತ್ಸೆ, ವರ್ಣಚಿಕಿತ್ಸೆ, ಚಕ್ರಚಿಕಿತ್ಸೆ, ಪ್ರಭಾವಲಯಚಿಕಿತ್ಸೆ, ಸಮ್ಮೋಹಿನಿ ಚಿಕಿತ್ಸೆ, ಪಾಸ್ಟ್ ಲೈಫ್ ರಿಗ್ರೆಷನ್, ಮೈಂಡ್ ಇಮೇಜರಿ ಟೆಕ್ನಿಕ್, ಮ್ಯಾಗ್ನೆಟಿಕ್ ಥೆರಪಿ, ಪೆಂಡ್ಯೂಲಮ್, ಯಂತ್ರ, ಮಂತ್ರ, ತಂತ್ರ, ಯೋಗ, ಪ್ರಾಣಾಯಾಮ, ಉಪವಾಸ ಚಿಕಿತ್ಸೆ, ಧ್ಯಾನಗಳು, ದರ್ಭೆ ಚಿಕಿತ್ಸೆ, ಮನೆ ಮದ್ದುಇತ್ಯಾದಿಯಾಗಿ ಐವತ್ತಕ್ಕೂ ಹೆಚ್ಚಿನ ಪ್ರಾಕೃತಿಕ ಚಿಕಿತ್ಸಾ ವಿಧಾನಗಳು ನಮ್ಮ ಸಂಸ್ಥೆಯಲ್ಲಿಯೇ ದೊರೆಯುತ್ತವೆ. ನಮ್ಮ ದೇಶದ ಸಂಸ್ಕೃತಿಯಲ್ಲಿ ಇಂತಹ ನೂರಾರು ಚಿಕಿತ್ಸಾ ವಿಧಾನಗಳಿವೆ. ನಮಗೆ ಗೊತ್ತಿರುವುದು ಕೇವಲ ಐವತ್ತು. ಈ ಐವತ್ತು ವಿದ್ಯೆಗಳನ್ನೇ ಉಪಯೋಗಿಸಿಕೊಂಡು ಪ್ರಪಂಚದಾದ್ಯಂತ ಸುಮಾರು ಇಪ್ಪತ್ಮೂರು ಸಾವಿರಕ್ಕೂ ಹೆಚ್ಚು ಜನರಿಗೆ ಸೇವೆ ಸಲ್ಲಿಸುವ ಅವಕಾಶನಮಗೆ ದೊರೆತಿದೆ. ಇಂತಹ ಚಿಕಿತ್ಸಾ ವಿಧಾನಗಳನ್ನು ನಾವು ಸದುಪಯೋಗ ಮಾಡಿಕೊಳ್ಳಬೇಕು. ನಾವು ಯಾವುದನ್ನೂ ಅತಿಯಾಗಿ ಅವಲಂಬಿಸಿ ಯಾಂತ್ರಿಕ ಜೀವನವನ್ನು ನಡೆಸಬಾರದು.

ಒಂದೆರಡು ಸಣ್ಣ ಮನೆ ಮದ್ದಿನ ಉದಾಹರಣೆಗಳನ್ನು ನೋಡೋಣ. ಮಂಡಿನೋವು ಅಥವ ಕೀಲು ನೋವು ಉಂಟಾದರೆ ಏನೇನೋ ಪರೀಕ್ಷೆಮಾಡಿಸಿ ಒಂದಷ್ಟು ನೋವು ನಿವಾರಕಗಳನ್ನು ಕೊಡುತ್ತಾರೆ. ನೋವು ನಿವಾರಕಗಳನ್ನು ಯಾವಾಗಲೂ ನುಂಗುತ್ತಿರಬಾರದು. ಅವು ಯಾವ ಕಂಪೆನಿಯದ್ದಾದರೂ ಅಪಾಯಕಾರಿ ಔಷಧಗಳು.

ಪುಟ 8 ರಲ್ಲಿ ಮುಂದುವರೆದಿದೆ



ಅನಂತಪಥ ಮಾಸಪತ್ರಿಕೆಯ ಅಕ್ಟೋಬರ್ ೨೦೨೧ ಸಂಚಿಕೆಯ ಬಿಡುಗಡೆ ಸಮಾರಂಭವು ಅದಮ್ಯಚೇತನದ ಸಭಾಂಗಣದಲ್ಲಿ ಜರುಗಿತು. ಪ್ರತಿ ತಿಂಗಳಿನಂತೆ ಅಕ್ಟೋಬರ್ ೨೨ನೇ ತಾರೀಕು ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ವಹಿಸಿದ್ದರು. ಬೆಂಗಳೂರಿನ ಓಂ ಸೇವಾ ಕೇಂದ್ರದ ಮುಖ್ಯಸ್ಥರಾದ ಡಾ. ಸಿ.ಎನ್. ಕೃಷ್ಣ ಗುರೂಜಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಪತ್ರಿಕೆಯನ್ನು ಬಿಡುಗಡೆಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ಕೃಷ್ಣ ಗುರೂಜಿಯವರು, ಈವರೆಗೆ ಪ್ರಕಟವಾಗಿರುವ ಅನಂತಪಥ ಮಾಸಪತ್ರಿಕೆಯ ಎಲ್ಲ ಸಂಚಿಕೆಗಳನ್ನೂ ತಾವು ಓದಿದ್ದು, ಪ್ರತಿ ಸಂಚಿಕೆಯೂ ಅತ್ಯುಪಯುಕ್ತವೂ ಸಂಗ್ರಾಹ್ಯವೂ ಆದ ಲೇಖನಗಳಿಂದ ಕೂಡಿವೆಯೆಂದು ಶ್ಲಾಘಿಸಿದರು. ದಿವಂಗತ ಅನಂತಕುಮಾರರ ಜೀವನ, ವ್ಯಕ್ತಿತ್ವ ಸಾಧನೆಗಳು ಮಾನವ ಸಮಾಜಕ್ಕೆ ಆದರ್ಶಪ್ರಾಯವಾಗಿದ್ದು, ಅವರ ಬದುಕಿನ ದಾರಿಯನ್ನು ಅರಿಯಲು ಈ ಮಾಸಪತ್ರಿಕೆಯ ಓದಿನಿಂದ ಪ್ರಯೋಜನವೊದಗುತ್ತದೆ ಯೆಂದು ಅಭಿಪ್ರಾಯಪಟ್ಟರು.

ಪತ್ರಿಕೆಯ ಬಿಡುಗಡೆ ಕಾರ್ಯಕ್ರಮದಲ್ಲಿ ಪತ್ರಿಕೆಯ ಸಂಪಾದಕರಾದ ಶ್ರೀ ಟಿ.ಎಸ್. ಗೋಪಾಲ್, ದೂರವಾಣಿ ಇಲಾಖೆಯ ನಿವೃತ್ತ ಉಪಮಹಾಪ್ರಬಂಧಕರಾದ ಶ್ರೀ ಎಂ. ಗಣಪತಿ ಭಟ್, ಶ್ರೀಮತಿ ಪದ್ಮಾ ಕೃಷ್ಣ ಮೊದಲಾದವರು ಉಪಸ್ಥಿತರಿದ್ದರು.

# ಅಭಿವೃದ್ಧಿಪರ ರಾಜಕೀಯ ಮತ್ತು ರಾಷ್ಟ್ರ ನಿರ್ಮಾಣ

ಪುಟ 1 ರಿಂದ





ಶ್ರೀ ನಿತಿನ್ ಗಡ್ಕರಿ

ಸುಸ್ಥಿರವಾದ ಜೀವನ ದೊರೆಯಬೇಕು ಎಂಬುದು ನಮ್ಮ ಆಶಯ. ಜೊತೆಗೆ ಈ ನಮ್ಮ ಮಾತೃಭೂಮಿಯು ಸುಖೀ ಮತ್ತು ಸಂಪನ್ನ ದೇಶವಾಗಿದ್ದರೆ ಸಾಲದು, ಇಡೀ ಪ್ರಪಂಚದಲ್ಲಿ ಅತ್ಯಂತ ಶಕ್ತಿಶಾಲಿ ರಾಷ್ಟ್ರವಾಗಿ ಬೆಳೆಯಬೇಕು. ಇತರರ ಮೇಲೆ ಆಕ್ರಮಣ ಮಾಡಿ ದೇಶದ ಗಡಿಗಳನ್ನು ವಿಸ್ತರಿಸುವುದು ನಮ್ಮ ಉದ್ದೇಶವಲ್ಲ; ಆದರೆ ಶಾಂತಿ ಮತ್ತು ಅಹಿಂಸೆಗಳ ಪಾಲನೆಗೂ ನಮಗೆ ಸಾಮರ್ಥ್ಯ ಬೇಕು. ಶಾಂತಿ ಮತ್ತು ಸದ್ಭಾವಗಳ ಸ್ಥಾಪನೆಗೂ ನಮಗೆ ಸಾಮರ್ಥ್ಯ ಬೇಕು, ಈ ಸಾಮರ್ಥ್ಯವನ್ನು ಹೊಂದಲು ನಾವು ಸಂಕಲ್ಪಿತರಾಗಿದ್ದೇವೆ.

ವಿದ್ಯಾರ್ಥಿ ಪರಿಷತ್ತಿನಲ್ಲಿ ಕೆಲಸ ಮಾಡುವಾಗ ನಮಗೊಂದು ಸೂತ್ರ ಹೇಳಿಕೊಡುತ್ತಿದ್ದರು. A ಎಂಬ ವ್ಯಕ್ತಿ $a^2$ ಮತ್ತು B ಎಂಬ ವ್ಯಕ್ತಿಯು $b^2$ ಕೆಲಸಗಳನ್ನು ಪ್ರತ್ಯೇಕವಾಗಿ ಮಾಡಿದರೆ ಒಟ್ಟು ಕೆಲಸ $a^2+b^2$ ಆದರೆ ಅವರಿಬ್ಬರೂ ಒಟ್ಟಿಗೆ ಸೇರಿ ಕೆಲಸ ಮಾಡಿದರೆ ಒಟ್ಟು ಉತ್ಪನ್ನ $a^2+b^2+2ab$ ಆಗುತ್ತದೆ. ಇಲ್ಲಿನ ಹೆಚ್ಚುವರಿ 2ab ಯು ಸಾಂಘಿಕ ಕಾರ್ಯದ ಪರಿಣಾಮ. ಒಂದು ತಂಡದಲ್ಲಿ ಮುಖಂಡನಿಂದ ಕಾರ್ಯಕರ್ತನ ವರೆಗೆ ಪ್ರತಿಯೊಬ್ಬರೂ ಸಮಾನರಾಗಿರುತ್ತಾರೆ, ಪ್ರತಿಯೊಬ್ಬರ ಕೆಲಸವೂ ಮಹತ್ವಪೂರ್ಣವಾಗಿರುತ್ತದೆ. ಈ ರೀತಿಯಾಗಿ ಸಾಮೂಹಿಕವಾಗಿ ಕೆಲಸ ಮಾಡುವ ಪದ್ಧತಿಯನ್ನು ವಿಕಸಿತಗೊಳಿಸಿದರೆ ಪ್ರಗತಿಯ ಗತಿ ವೇಗವನ್ನು ಪಡೆದುಕೊಳ್ಳುತ್ತದೆ.

ಭಾರತದ ಸಮಾಜವು ಪ್ರಗತಿಗೆ ಆರ್ಥಿಕತೆ, ನೈತಿಕತೆ ಮತ್ತು ಪರಿಸರ ಎಂಬ ಮೂರು ಸ್ತಂಭಗಳನ್ನು ಅನುಸರಿಸುತ್ತದೆ. ಪರಿಸರ ಮತ್ತು ವಾತಾವರಣವನ್ನು ಕಾಪಾಡಿಕೊಂಡು ನೈತಿಕವಾದ ಮಾರ್ಗದಲ್ಲಿ ಆರ್ಥಿಕತೆಯನ್ನು ಬಲಪಡಿಸಿ ಭಾರತವನ್ನು ವಿಶ್ವದ ಮುಂಚೂಣಿ ರಾಷ್ಟ್ರವನ್ನಾಗಿ ಕಟ್ಟುವುದು ನಮ್ಮ ಸಂಕಲ್ಪ.

ಭಾರತವನ್ನು ಆರ್ಥಿಕವಾಗಿ ಪ್ರಬಲವಾದ ದೇಶವನ್ನಾಗಿ ಮಾಡಿ ವಿಶ್ವದ ಎಲ್ಲ ದೇಶಗಳೂ ಗಮನಿಸುವಂತಾಗಬೇಕಾದರೆ ನಾವು ರಾಷ್ಟ್ರೀಯ ಮನೋಭಾವದಿಂದ ರಾಷ್ಟ್ರದ ಪುನರ್ನಿರ್ಮಾಣದಲ್ಲಿ ತೊಡಗಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ರಸ್ತೆಸಾರಿಗೆ ಮತ್ತು ಹೆದ್ದಾರಿ ಇಲಾಖೆ ಅನೇಕ ಯೋಜನೆಗಳನ್ನು ಕೈಗೆತ್ತಿಕೊಂಡಿದೆ.

ರಸ್ತೆ ಸಾರಿಗೆಯ ಮೂಲಕ ಸಾಗಣೆ ವೆಚ್ಚವು ಪ್ರತಿ ಕಿಲೋಮೀಟರಿಗೆ 10 ರೂಪಾಯಿಗಳಾದರೆ ರೈಲುಗಳ ಮೂಲಕ ಸಾಗಣೆ ಮಾಡಲು 6 ರೂಪಾಯಿ ವೆಚ್ಚ ತಗಲುತ್ತದೆ. ಅದೇ ಸರಕನ್ನು ಜಲಸಾರಿಗೆಯ ಮೂಲಕ ರವಾನಿಸಿದರೆ ಕೇವಲ ಒಂದು ರೂಪಾಯಿ ವೆಚ್ಚ ತಗಲುತ್ತದೆ. ಹೀಗಾಗಿ ಸಾರಿಗೆಯ ವಿಷಯದಲ್ಲಿ ನಾವು ಕ್ರಮಾನುಗತವಾಗಿ ಜಲಮಾರ್ಗ, ರೈಲು ಮಾರ್ಗ, ರಸ್ತೆಸಾರಿಗೆ ಮತ್ತು ನಂತರ ವಾಯುಮಾರ್ಗಕ್ಕೆ ಆದ್ಯತೆಯನ್ನು ನೀಡುತ್ತೇವೆ.

ಇಂದಿಗೂ ನಮ್ಮ ದೇಶದ ಶೇ. 90 ರಷ್ಟು ಪ್ರಯಾಣಿಕ ಸಂಚಾರ ಮತ್ತು ಶೇ 70 ರಷ್ಟು ಸರಕು ಸಾಗಣೆ ರಸ್ತೆಗಳ ಮೂಲಕವೇ ನಡೆಯುತ್ತಿದೆ. ಇದರಿಂದಾಗಿ ನಮ್ಮಲ್ಲಿ ಸರಕು ರವಾನೆ ವೆಚ್ಚದ ಪ್ರಮಾಣ ಶೇ 16 ರಿಂದ ಶೇ 18 ರಷ್ಟಿದೆ. ಚೀನಾದಲ್ಲಿ ಈ ಪ್ರಮಾಣ ಶೇ 8 ರಿಂದ ಶೇ 10 ರಷ್ಟಿದೆ. ಜಾಗತಿಕವಾಗಿ ಸ್ಪರ್ಧಾತ್ಮಕವಾಗಿರಲು ನಮ್ಮ ಸರಕು ರವಾನೆ ವೆಚ್ಚವನ್ನು ಶೇ 10 ರಿಂದ ಶೇ 12 ರ ಮಟ್ಟಕ್ಕೆ ಇಳಿಸಬೇಕು. ಚೀನಾದಲ್ಲಿ ಮತ್ತು ಯೂರೋಪಿನಲ್ಲಿ ಹೆಚ್ಚಿನ ಉತ್ಪಾದಕ ಘಟಕಗಳು, ಕೈಗಾರಿಕಾ ವಲಯಗಳು ನದಿಗಳ ತಟದಲ್ಲಿವೆ ಎಂಬುದು ಗಮನಾರ್ಹ.

ಒಳನಾಡು ಜಲಮಾರ್ಗಗಳನ್ನು ಅಭಿವೃದ್ಧಿಪಡಿಸಲು ನಾವು ಕಟಿಬದ್ಧರಾಗಿದ್ದೇವೆ. ಒಂದು ವಿಶೇಷ ಮಸೂದೆಯ ಮೂಲಕ ಸುಮಾರು 103 ಜಲಮಾರ್ಗಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸಿದ್ದೇವೆ. ವಾರಣಾಸಿಯಿಂದ ಹಾಲ್ದಿಯಾ ವರೆಗಿನ 1350 ಕಿಲೋಮೀಟರ್ ಉದ್ದದ ಗಂಗಾ ಜಲಮಾರ್ಗ ಸಿದ್ಧವಾಗಿದೆ. ಹಾಲ್ದಿಯಾ, ಗಾಜಿಪುರ, ವಾರಣಾಸಿ ಮತ್ತು ಸಾಹಿಬ್ ಗಂಜ್ ಗಳಲ್ಲಿ ವಿವಿಧ ಸಾರಿಗೆ ವ್ಯವಸ್ಥೆಗಳ ಅನುಕೂಲವಿರುವ ನಾಲ್ಕು ಮಲ್ಟಿ ಮೋಡಲ್ ಹಬ್ ಗಳನ್ನು ಅಭಿವೃದ್ಧಿಪಡಿಸಲಾಗಿದೆ. ಬ್ರಹ್ಮಪುತ್ರ ನದಿಯಲ್ಲಿಯೂ ಡ್ರೆಜ್ಜಿಂಗ್ ಕಾರ್ಯ ನಡೆಯುತ್ತಿದೆ.

ಇವೆಲ್ಲವೂ ಪೂರ್ಣಗೊಂಡಾಗ ಪೂರ್ವೋತ್ತರ ರಾಜ್ಯಗಳೊಡನೆ ಮತ್ತು ದಕ್ಷಿಣಪೂರ್ವ ಏಷ್ಯಾದ ಬಹುತೇಕ ದೇಶಗಳೊಡನೆ ನಮ್ಮ ವ್ಯವಹಾರವು ಜಲಮಾರ್ಗದ ಮೂಲಕವೇ ನಡೆಯಬೇಕೆನ್ನುವುದು ನಮ್ಮ ಮಹತ್ವಾಕಾಂಕ್ಷೆ.

ನಾವು ಭೂಸಾರಿಗೆಯನ್ನು ಅತಿಯಾಗಿ ಅವಲಂಬಿಸಿರುವುದರಿಂದ ನಮ್ಮ ಇಂಧನ ಆಮದಿನ ವೆಚ್ಚವು ವಾರ್ಷಿಕವಾಗಿ ಸುಮಾರು ಎಂಟು ಲಕ್ಷ ಕೋಟಿ ರೂಪಾಯಿಗಳಾಗಿದೆ. ಇದೇ ಗತಿಯಲ್ಲಿ ಇದು ಮುಂದಿನ ಐದು ವರ್ಷಗಳಲ್ಲಿ 25 ಲಕ್ಷ ಕೋಟಿ ರೂಪಾಯಿಗಳಿಗೆ ಏರುವ ನಿರೀಕ್ಷೆಯಿದೆ. ಹೀಗಾಗಿ ಆಮದು ಇಂಧನಕ್ಕೆ ಬದಲಾಗಿ ಕಡಿಮೆ ವೆಚ್ಚದ ಮಾಲಿನ್ಯ ರಹಿತ ಹಾಗೂ ಸ್ವದೇಶೀಯವಾದ ಇಂಧನಗಳ ಬಳಕೆಯನ್ನು ಪ್ರೋತ್ಸಾಹಿಸುತ್ತೇವೆ. ಈ ನಿಟ್ಟಿನಲ್ಲಿ ಲಾರಿ, ಬಸ್ಸುಗಳಲ್ಲಿ ದ್ರವೀಕೃತ ನೈಸರ್ಗಿಕ ಅನಿಲ ಮತ್ತು ಮತ್ತು ನಗರ ಸಾರಿಗೆಯಲ್ಲಿ ಸಾಂದ್ರೀಕೃತ ನೈಸರ್ಗಿಕ ಅನಿಲಗಳ ಬಳಕೆಯ ಬಗ್ಗೆ ಯೋಜನೆಗಳನ್ನು ರೂಪಿಸಿ ಕಾರ್ಯಪ್ರವೃತ್ತರಾಗಿದ್ದೇವೆ.

ಹಸಿರು ಜಲಜನಕವು ನಮ್ಮ ಆದ್ಯತೆಯನ್ನು ಗಳಿಸಿದೆ. ನಾಗಪುರ ನಗರಾಡಳಿತವು ವ್ಯರ್ಥವಾಗಿ ಹರಿಯುವ ನೀರು ಮತ್ತು ಚರಂಡಿಗಳ ಕೊಳಚೆ ನೀರನ್ನು ಮಹಾರಾಷ್ಟ್ರ ಸರಕಾರಕ್ಕೆ ಮಾರಾಟ ಮಾಡುವ ಮೂಲಕ ವಾರ್ಷಿಕವಾಗಿ 300 ಕೋಟಿ ರೂಪಾಯಿ ಆದಾಯ ಗಳಿಸುತ್ತಿದೆ! ಪಳೆಯುಳಿಕೆ ಇಂಧನ ಆರ್ಥಿಕತೆಯ ಬದಲು ಇಥೆನೋಲ್ ಆರ್ಥಿಕತೆಯತ್ತ ನಾವು ಹೊರಳಿಕೊಳ್ಳಬೇಕು. ಕಾಕಂಬಿ, ಅಕ್ಕಿ, ಜೋಳ ಮತ್ತು ದವಸಧಾನ್ಯಗಳನ್ನು ಇಥೆನಾಲ್ ಉತ್ಪಾದನೆಗೆ ಬಳಸುವ ಮೂಲಕ ರೈತರ ಆದಾಯದಲ್ಲಿಯೂ ವೃದ್ಧಿಯಾಗುತ್ತದೆ.

ಒಂದು ಯೂನಿಟ್ ಸೌರ ವಿದ್ಯುತ್ತು ತಯಾರಿಕೆಗೆ ಕೇವಲ 1.60 ರೂಪಾಯಿ ವೆಚ್ಚ ತಗಲುತ್ತದೆ. ಹೀಗಾಗಿ ಸೌರ ಇಂಧನದ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಇಂದು ನಮ್ಮ ಗ್ರಿಡ್ ಗಳಿಗೆ ಶೇ 38 ರಷ್ಟು ಸೌರ ವಿದ್ಯುತ್ತು ಸರಬರಾಜಾಗುತ್ತಿದೆ.

ಮುಂದಿನ ಐದು ವರ್ಷಗಳಲ್ಲಿ ಆಟೊಮೊಬೈಲ್ ಉದ್ಯಮವು ಅಸಾಧಾರಣ ರೀತಿಯಲ್ಲಿ ಬೆಳೆಯಲಿದೆ. ಇಂದು ಈ ಕ್ಷೇತ್ರದಲ್ಲಿ 7.57 ಲಕ್ಷ ಕೋಟಿ ರೂಪಾಯಿಗಳ ವಾರ್ಷಿಕ ವ್ಯವಹಾರ ನಡೆಯುತ್ತಿದ್ದರೆ ಇದು ಇನ್ನು ಐದುವರ್ಷಗಳಲ್ಲಿ 15 ಲಕ್ಷ ಕೋಟಿಗಳಿಗೆ ಏರಿ ಭಾರತವು ಜಗತ್ತಿನ ಅತಿದೊಡ್ಡ ರಫ್ತು ದೇಶವಾಗಲಿದೆ. ಆಟೋಮೊಬೈಲ್ ಕ್ಷೇತ್ರವು ಜನರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದಲ್ಲದೆ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಪ್ರಮುಖ ಆದಾಯಮೂಲವೂ ಆಗಲಿದೆ.

ಮುಂದಿನ ಮೂರು ವರ್ಷಗಳಲ್ಲಿ ಭಾರತದ ಎಲ್ಲ ರಾಷ್ಟ್ರೀಯ ಹೆದ್ದಾರಿಗಳನ್ನೂ ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಿಸುವುದು ನಮ್ಮ ಗುರಿ. 2014 ರಲ್ಲಿ 96000 ಕಿಲೋ ಮೀಟರುಗಳಷ್ಟಿದ್ದ ರಾಷ್ಟ್ರೀಯ ಹೆದ್ದಾರಿಗಳನ್ನು ಇಂದು 147000 ಕಿಲೋಮೀಟರುಗಳಿಗೆ ಏರಿಸಿದ್ದೇವೆ. ಅಂದು ದಿನವೊಂದಕ್ಕೆ ಕೇವಲ ಎರಡು ಕಿಲೋಮೀಟರ್ ಹೆದ್ದಾರಿ ನಿರ್ಮಾಣವಾಗುತ್ತಿದ್ದರೆ ಇಂದು 38 ಕಿಲೋಮೀಟರ್ ಹೆದ್ದಾರಿ ನಿರ್ಮಾಣವಾಗುತ್ತಿದೆ. ರಸ್ತೆ ನಿರ್ಮಾಣದ ವೇಗದಲ್ಲಿ ನಾವು ಅನೇಕ ವಿಶ್ವದಾಖಲೆಗಳನ್ನು ಮಾಡಿದ್ದೇವೆ.

ದೆಹಲಿಯಿಂದ ಜೈಪುರ, ಹರಿದ್ವಾರ, ಡೆಹರಾಡೂನ್, ಚಂಡೀಗಢಗಳನ್ನು ಕೇವಲ ಎರಡು ಗಂಟೆಗಳಲ್ಲಿ ತಲುಪುವ ಗ್ರೀನ್ ಎಕ್ಸ್ ಪ್ರೆಸ್ ಹೆದ್ದಾರಿಗಳ ನಿರ್ಮಾಣ ನಡೆಯುತ್ತಿದೆ. ಈ ಯೋಜನೆಯ ಅಡಿಯಲ್ಲಿ ದೆಹಲಿಯಿಂದ ಅಮೃತಸರವನ್ನು ಕೇವಲ 4 ½ ಗಂಟೆಗಳಲ್ಲಿ, ಮುಂಬಯಿಯನ್ನು ಕೇವಲ 12 ಗಂಟೆಗಳಲ್ಲಿ, ಬೆಂಗಳೂರಿನಿಂದ ಚೆನ್ನೈ ನಗರವನ್ನು ಕೇವಲ 2 ಗಂಟೆಗಳಲ್ಲಿ ಕ್ರಮಿಸಬಹುದಾದ ರಸ್ತೆಗಳನ್ನು ನಿರ್ಮಾಣ ಮಾಡಲಾಗುತ್ತದೆ. ಇವುಗಳಿಂದ ಸರಕು ಸಾಗಣೆಯಲ್ಲಿ ಕ್ಷಮತೆ ಹೆಚ್ಚಾಗಿ ಅದರ ಲಾಭ ಉತ್ಪಾದಕರಿಗೆ ಮತ್ತು ಬಳಕೆದಾರರಿಗೆ ದೊರೆಯುತ್ತದೆ.

"ರಫ್ತುಗಳನ್ನು ಹೆಚ್ಚಿಸಿ, ಆಮದುಗಳನ್ನು ತಗ್ಗಿಸಿ; ಜೊತೆಗೆ ಪರಿಸರದ ಬಗ್ಗೆ ಕಾಳಜಿಯಿರಲಿ" – ಇದು ಆತ್ಮ ನಿರ್ಭರ ಭಾರತದ ಪರಿಕಲ್ಪನೆ. ತೀವ್ರವಾದ ರಾಷ್ಟ್ರೀಯ ಮನೋಭಾವದಿಂದ ಸಾಂಘಿಕವಾಗಿ ಕೆಲಸ ಮಾಡಿದರೆ ನಮ್ಮ ದೇಶವು ವಿಶ್ವದ ಅಗ್ರಗಣ್ಯ ದೇಶವಾಗುವುದರಲ್ಲಿ ಸಂಶಯವಿಲ್ಲ.

# ಅನಂತಕುಮಾರ್ : ಒಂದು ಖಾಸಗಿ ನಮನ

ಬೇಳೂರು ಸುದರ್ಶನ

ನಾನು ಕಂಡಂತೆ



ಅನಂತಕುಮಾರ್

೧೯೮೬ರಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನಿಂದ ರಾಜ್ಯದ ಶಿಕ್ಷಣ ಕ್ಷೇತ್ರದ ದುಸ್ಥಿತಿಯ ಬಗ್ಗೆ ಕರಾಳ ಪತ್ರ ರೂಪಿಸಿದವರು ಅನಂತಕುಮಾರ್. ಅವರಿಗೆ ಸಹಾಯಕನಾಗಿ ಲೇಖನಿ ಹಿಡಿದಿದ್ದು ನಾನು. ಕೊನೆಗೆ ಅದಕ್ಕೊಂದು ಅರ್ಥವತ್ತಾದ ಮುಖಪುಟ ಬಿಡಿಸಿದ್ದು ಕಲಾವಿದ ಮಿತ್ರ ದೇವರಾಜ! ಮುಂದೆ, ೨೦೧೮ ನವೆಂಬರ್ ೧೨ರಂದು ನಮ್ಮನ್ನು ಅಗಲಿದ ಅನಂತಕುಮಾರರ ಅಂತಿಮ ದರ್ಶನ ಪಡೆಯುವಾಗ ನನಗೂ ದೇವರಾಜನಿಗೂ ಹಿರಿಯ ಮಿತ್ರನೊಬ್ಬನನ್ನು ಕಳೆದುಕೊಂಡ ಕರಾಳ ದಿನದಂತೆ ಅನ್ನಿಸಿತ್ತು.

ಆ ಕರಾಳ ಪತ್ರವನ್ನು ಪಿ.ಲಂಕೇಶರೇ ಲಂಕೇಶ್ ಪತ್ರಿಕೆಯಲ್ಲಿ ಅತ್ಯಂತ ಹೃತ್ಪೂರ್ವಕವಾಗಿ ಶ್ಲಾಘಿಸಿ, ಎಬಿವಿಪಿಯ ಒಂದು ಒಳ್ಳೆಯ ಕೆಲಸ ಎಂದು ಒಂದು ಪುಟ ವರದಿ ಮಾಡಿಸಿದ್ದರು. ಆ ದಿನಗಳಿಂದ ಈ ದಿನದವರೆಗೂ ಕರಾಳ ಪತ್ರದ ಮೊನಚು ಶೈಲಿಯನ್ನು ಯಾರೂ ಮರೆತಿಲ್ಲ. ಅದಕ್ಕೆಲ್ಲ ಕಾರಣ ಅನಂತಕುಮಾರ್. ತಪ್ಪಿಲ್ಲದ ಅಕ್ಷರಗಳು, ಪದ ಪದವನ್ನು ಜೋಡಿಸಿ ಹೊಮ್ಮಿಸುವ ಕಟು ಟೀಕಾವಾಕ್ಯಗಳು - ಎಲ್ಲವೂ ಪುಸ್ತಕದ ಕರಾಳ ಸಂಗತಿಯನ್ನೂ ಮನಸ್ಸಿನಲ್ಲಿ ಉಳಿಯುವಂತೆ ಮಾಡಿದ್ದವು.

೧೯೮೨-೮೩ರ ವರ್ಷದಲ್ಲಿ ಅಸ್ಸಾಂ ಹತ್ಯಾಕಾಂಡ ನಡೆದಿತ್ತು. ಆಗ ದಾವಣಗೆರೆಯಲ್ಲಿ ಈ ಕುರಿತ ಪ್ರತಿಭಟನಾ ಸಭೆ ನಡೆಸಲು ಅನಂತಕುಮಾರ್ ಬಂದಿದ್ದರು. ಪತ್ರಿಕಾಗೋಷ್ಠಿಗೆಂದು ತಯಾರಿಸಿದ ಟಿಪ್ಪಣಿಯನ್ನು ನನಗೆ ಕೊಟ್ಟು "ಏನಾದ್ರೂ ತಪ್ಪಿದ್ರೆ ತಿದ್ದು" ಎಂದರು. 'ಪುಡಿ ಕವಿ'ಯಾಗಿದ್ದ ನಾನು ಹುರುಪಿನಿಂದ ಪೆನ್ನು ಹಿಡಿದು ಕುಳಿತು ತಿದ್ದಲು ಕಣ್ಣಾಡಿಸಿದೆ. ಒಂದಾದರೂ ತಪ್ಪು ಇದ್ದರೆ ತಾನೆ? ಅವರ ಅಕ್ಷರಗಳೇನೋ ಅವರದೇ ಮೋಡಿಯಲ್ಲಿ ಇರುತ್ತಿದ್ದವು. ಆದರೆ ಯಾವ ಪದವನ್ನೂ ತೆಗೆದುಹಾಕುವ, ಬದಲಿಸುವ, ಸೇರಿಸುವ ಅಗತ್ಯ ಇರಲೇ ಇಲ್ಲ. ಅದಾಗಿ ಚಾ ಕುಡಿಯುತ್ತ ಅವರು ನಗೆಹನಿಗಳನ್ನು ಹಂಚಿಕೊಂಡರು. ನನಗಂತೂ ಅಂದಿನಿಂದಲೇ ಅನಂತಕುಮಾರರ ಸಹವಾಸ ಮತ್ತೆ ಮತ್ತೆ ಬೇಕು ಅನ್ನಿಸಿದ್ದು ನಿಜ.

೧೯೮೫ರಲ್ಲಿ ನಾನು ಎಬಿವಿಪಿ ವಿಸ್ತಾರಕನಾಗಿ ಬೆಳಗಾವಿ ಜಿಲ್ಲಾ ಯುವ ಸಮಾವೇಶ ಸಿದ್ಧತೆ ನಡೆಸಲು (ಅದು ಅಂತಾರಾಷ್ಟ್ರೀಯ ಯುವ ವರ್ಷ) ಹೋಗಿದ್ದೆ ಒಂದು ವಾರ ಅಲ್ಲಿದ್ದು ನಾನು ಮಾಡಿದ ಕೆಲಸ ಎಂದರೆ ಪ್ರಿನ್ಸಿಪಾಲರ ವಿರುದ್ಧ ಪ್ಲಕಾರ್ಡ್ ಬರೆದಿದ್ದು. ವಾರದ ಕೊನೆಗೆ ಅನಂತಕುಮಾರ್ ಬಂದರು. ಏನೆಲ್ಲ ಯೋಜನೆ ಮಾಡಿದ್ದೀಯ ಎಂದು ಕೇಳಿದರು. ಇರುವ ಸಂಗತಿಯನ್ನೆಲ್ಲ ತಿಳಿಸಿದೆ. "ಪರವಾಗಿಲ್ಲ, ಇದ್ದಿದ್ರಲ್ಲೇ ಒಂದಷ್ಟು ಕೆಲಸ ಮಾಡಿದೀಯ" ಎಂದು ಬೆನ್ನು ತಟ್ಟಿದರು. ನನ್ನ ಜೊತೆ ಸೈಕಲ್ಲಿನಲ್ಲೂ ತಿರುಗಾಡಿದರು. ಆಮೇಲೆ ಅವರ ಸ್ನೇಹಿತ ಶ್ರೀ ಗುಡ್ಡು ಇನಾಂದಾರರ ಉದ್ಯಮ ಘಟಕಕ್ಕೆ ಕರೆದುಕೊಂಡು ಹೋದರು. ದಿನವಿಡೀ ನನ್ನನ್ನು ಕರೆದುಕೊಂಡೇ ಓಡಾಡಿದರು.

೧೯೮೬ರಲ್ಲಿ ದಾವಣಗೆರೆಯಲ್ಲಿ ಎಬಿವಿಪಿಯ ರಾಜ್ಯ ಸಮ್ಮೇಳನ ನಡೆಯಿತು. ಮೂರು ವರ್ಷಗಳ ಹಿಂದೆ ದುರ್ಬಲವಾಗಿದ್ದ ಎಬಿವಿಪಿ ಶಾಖೆಯನ್ನು ರಾಜ್ಯ ಸಮ್ಮೇಳನ ಮಾಡುವಷ್ಟರ ಹಂತಕ್ಕೆ ತಂದ ಖುಷಿ ನಮ್ಮದಾಗಿತ್ತು (ನಾನು, ಜಿಕೆ ಸುರೇಶ್, ಮಂಜಪ್ಪ, ತಿಮ್ಮಪ್ಪ, ಹರಿಹರದ ಬಿ ವಿ ವಸಂತಕುಮಾರ್, ಕೃಷ್ಣಮೂರ್ತಿ ಶೆಟ್ಟರು, ವೀರಣ್ಣ, ಬ. ರಾಜಶೇಖರ ವೀಣಾ, ವಿಶ್ವೇಶ್ವರ, ಚಿತ್ರದುರ್ಗದ ಅರುಣಕುಮಾರ್ ಹೀಗೆ.) ಆಗ ತಾನೇ ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಕ್ರೀಡಾಳು ವಂದನಾ ರಾವ್ ಮುಖ್ಯ ಅತಿಥಿ. ಅನಂತಕುಮಾರ್ ಅಂದು ಮಾಡಿದ ಭಾಷಣ ತುಂಬಾ ಜನಪ್ರಿಯವಾಗಿತ್ತು.

೧೯೮೭ರಲ್ಲಿ ಅನಂತಕುಮಾರ್ ಎಬಿವಿಪಿ ಬಿಟ್ಟು ಬಿಜೆಪಿ ಸೇರುವರು ಎಂಬ ಘೋಷಣೆ ಆಗಿದ್ದು ಬಾಗಲಕೋಟೆಯಲ್ಲಿ ನಡೆದ ಎಬಿವಿಪಿ ಪ್ರಾಂತ ಅಭ್ಯಾಸವರ್ಗದಲ್ಲಿ. ಅಲ್ಲಿ ಭಾಗವಹಿಸಿದ್ದ ನಾವು ಕೆಲವರು ಈ ವಿದಾಯದ ಬೇಸರದಿಂದ ಕಣ್ಣೀರು ಹಾಕಿದ್ದೆವು. ಆಗ ಅನಂತಕುಮಾರ್ ನಮ್ಮನ್ನು ಸಮಾಧಾನ ಮಾಡಿದ್ದರು.

ಆಗಿನ ಬಿಜೆಪಿ ರಾಜ್ಯ ಕಚೇರಿಯೂ ಬೆಂಗಳೂರಿನ ಕಾಟನ್ ಪೇಟೆಯಲ್ಲೇ ಇದ್ದಿತು. ಆಗ ನಂ ೯ , ಕೆ. ಕೆ. ಲೇನ್ ವಿಳಾಸದ ಈ ಕಚೇರಿ ಈಗಿನ ಕಾಲದ ಸುಪ್ರಸಿದ್ಧರ ಸಂಘಟನಾ ಕೇಂದ್ರವಾಗಿತ್ತು. ಆಗ ಅನಂತಕುಮಾರ್ ಎಬಿವಿಪಿ ಕಚೇರಿಗೇ ಬಂದು ಹರಟೆ ಹೊಡೆಯುತ್ತಿದ್ದರು. ನಾನು ಎಬಿವಿಪಿಯಲ್ಲಿ ಇದ್ದ ಕಾಲದಲ್ಲಿ ಹಲವು ಬೈಠಕ್ ಗಳಲ್ಲಿ ಅವರ ಸಹವಾಸ ನನಗೆ ಸಿಕ್ಕೇ ಸಿಗುತ್ತಿತ್ತು.

ಹೋತಾನಂದ ಎಂಬ ಕಾವ್ಯನಾಮದಲ್ಲಿ ಅನಂತಕುಮಾರ್ ಹಲವು ಚೌಪದಿಗಳನ್ನು ಬರೆದಿದ್ದಾರೆ. ನಾನು ಯಾವುದೇ ಹೊಸ ಡೈರಿಯನ್ನು ಪಡೆದ ಮುಂದಿನ ಬೈಠಕ್ಕಿನಲ್ಲಿ ಅದನ್ನು ಅವರಿದ್ದ ಕಡೆಗೆ ದಾಟಿಸುತ್ತಿದ್ದೆ. ನನ್ನ ಕಡೆಗೆ ನೋಡಿ ಡೈರಿಯ ಮೊದಲನೇ ಪುಟದಲ್ಲಿ ಒಂದು ಹೋತಾನಂದ ವಚನವನ್ನು ಬರೆದು ನನಗೆ ಕಳಿಸುತ್ತಿದ್ದರು. ಡೈರಿಯ ಮೊದಲ ಪುಟದಲ್ಲಿ ಏನಾದರೂ ಒಳ್ಳೆಯ ಸಂದೇಶ ಇರಬೇಕೆಂಬ ನನ್ನ ಹಂಬಲವನ್ನು ಅವರು ಚೆನ್ನಾಗಿ ಅರಿತಿದ್ದರು. ಒಂದೆರಡು ಸಲ ನನ್ನ ಡೈರಿಯನ್ನು ಕಸಿದುಕೊಂಡು ಹೋತಾನಂದ ವಚನವನ್ನು ಬರೆದುಕೊಟ್ಟಿದ್ದೂ ಇದೆ.



೧೯೯೫ರಲ್ಲಿ ನಾನು ಬೆಂಗಳೂರಿಗೆ ಬಂದೆ. ಹೊಸದಿಗಂತದಲ್ಲಿದ್ದ ನಾನು ರಾತ್ರಿ ಪಾಳಿಯನ್ನೇ ಮುಂದುವರಿಸಿದ್ದೆ. ಬಿಜೆಪಿ ಕಚೇರಿಗೆ ಹೋಗಿ ಪಕ್ಷದ ಸಾಹಿತ್ಯ ರಚನೆ, ಮ್ಯಾಗಜಿನ್ - ಇವೆಲ್ಲವನ್ನೂ ಇತರರೊಂದಿಗೆ ನೋಡಿಕೊಳ್ಳುತ್ತಿದ್ದೆ. ೧೯೯೬ರಲ್ಲಿ ಅನಂತಕುಮಾರ್ ಲೋಕಸಭಾ ಸದಸ್ಯರಾದಾಗ ನನಗೂ ನನ್ನ ಆಗಿನ ಪತ್ರಕರ್ತ ಮಿತ್ರನಿಗೂ ಅನ್ನಿಸಿದ್ದು ಒಂದೇ ವಿಚಾರ: ಹೇಗಾದ್ರೂ ಮಾಡಿ ಒಂದು ಟೆಲಿಫೋನ್ ಸಂಪರ್ಕ ಪಡೆದುಕೊಳ್ಳಬೇಕು. ಇದಕ್ಕಾಗಿ ಆ ಪತ್ರಕರ್ತನಿಂದ ನನ್ನ ಕಚೇರಿ ದೂರವಾಣಿಗೆ ಹಲವಾರು ಸಲ ಕರೆಗಳು ಬಂದವು. ನಾನು ಆಗ ಅನಂತಕುಮಾರ್ ಜೊತೆ ಮಾತನಾಡಿ, ಅವರು ತಿಳಿಸಿದಂತೆ ಇಬ್ಬರ ಅರ್ಜಿಗಳನ್ನೂ ಸಲ್ಲಿಸಿದೆ. ಸಂಸದರ ಕೋಟಾದಲ್ಲಿ ಒಂದೇ ಒಂದು ಲೈನ್ ಬಾಕಿ ಉಳಿದಿತ್ತು. ಆಗ ಅನಂತಕುಮಾರ್ ತೀರ್ಮಾನದಂತೆ ನನಗೆ ಈ ಸಂಪರ್ಕವನ್ನು ಕಲ್ಪಿಸಲಾಯಿತು. ನನಗೆ ದೂರವಾಣಿ ಮಂಜೂರಾದ ಪತ್ರ ಈಗಲೂ ನನ್ನ ಕಡತದಲ್ಲಿದೆ.

ಅನಂತಕುಮಾರ್ ಕೇಂದ್ರ ಸಚಿವರಾದ ಮೇಲೆ ನಾನು ಅವರಿಂದ ಮಾಡಿಸಿಕೊಂಡ ಇನ್ನೊಂದು ಕೆಲಸ ಎಂದರೆ ಸಿರಿಭೂವಲಯದ ಮೂಲ ಪ್ರತಿಗಳನ್ನು ನೋಡಲು ದಿಲ್ಲಿ ಆರ್ಕೈವ್ಸ್ ಕಚೇರಿಯ ಪ್ರವೇಶ ಪಡೆದಿದ್ದು. ಸಿರಿಭೂವಲಯ ಎಂದರೆ ಅವರಿಗೇನೂ ಗೊತ್ತಿರಲಿಲ್ಲ. ಆದರೆ ಕೇಳಿದ್ದನ್ನು ಮಾಡಿಕೊಡುವಾ ಎಂಬ ಮನಸ್ಸು ಅವರದು.

೨೦೦೮ರ ಹೊತ್ತಿನಲ್ಲಿ ಮತ್ತೆ ಕೆಲಸ ಹುಡುಕಬೇಕಾದ ಅಗತ್ಯ ಬಿತ್ತು. ಇನ್ನೇನು ನನ್ನ ಹಳೆಯ ಕೆಲಸಕ್ಕೆ ಸೇರಬೇಕು ಎನ್ನುವಷ್ಟರಲ್ಲಿ ಅನಂತಕುಮಾರರಿಂದ ಕರೆ ಬಂತು. ಅವರು ಮತ್ತು ತೇಜಸ್ವಿನಿ ಅನಂತಕುಮಾರ್ ಇಬ್ಬರೂ ಸೂಚಿಸಿದ ಮೇರೆಗೆ, ೨೦೦೮ರಿಂದ ೨೦೦೯ರ ಮೇವರೆಗೆ ನಾನು ಅದಮ್ಯ ಚೇತನದಲ್ಲಿ ಕೆಲಸ ಮಾಡಿದೆ; ೨೦೦೯ರಲ್ಲಿ ಲೋಕಸಭಾ ಚುನಾವಣೆ ಬಂದಾಗ ಅನಂತಕುಮಾರ್ ಅವರ ಪ್ರಚಾರ ಸಾಹಿತ್ಯ, ವೆಬ್ ಸೈಟ್ - ಹೀಗೆ ಎಲ್ಲ ಅಭಿಯಾನಗಳಲ್ಲಿ ನಾನು ಸಕ್ರಿಯವಾಗಿ ಭಾಗವಹಿಸಿದೆ.

೨೦೧೪ರ ಲೋಕಸಭಾ ಚುನಾವಣೆಯಲ್ಲಿ ನಾನು ಮತ್ತೆ ಅನಂತಕುಮಾರ್ ಅವರ ಹಲವು ಪ್ರಚಾರ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡೆ. ಅವರ ಗೆಲುವಿನ ದಿನ ಅವರಿಂದಲೇ ಸಿಹಿ ಪಡೆದೆ. ಅನಂತರ ಅವರು ಆರಂಭಿಸಿದ ಹಸುರು ಅಭಿಯಾನದ ಹಲವು ಸಭೆಗಳಲ್ಲಿ ಭಾಗಿಯಾದೆ. ಅದಾಗಿ ಒಂದು ವರ್ಷಕ್ಕೇ ನಾನು ವೃತ್ತಿನಿಮಿತ್ತ ಮೈಸೂರಿಗೆ ಬಂದೆ.

ಮುಂದಿನ ವರ್ಷ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಮುನ್ನ ನನಗೆ ಕರೆ ಮಾಡಿಸಿ ಕನ್ನಡ ಭಾಷಾ ತಂತ್ರಜ್ಞಾನ ಬೆಳವಣಿಗೆ ಕುರಿತ ಸವಾಲುಗಳ ಬಗ್ಗೆ ಮಾಹಿತಿ ಪಡೆದುಕೊಂಡಿದ್ದರು; ಆಗ ಚಂಪಾ ಅವರ ಸಾಹಿತ್ಯ ಸಮ್ಮೇಳನದ ರಾಜಕೀಯಕರಣದ ಸುದ್ದಿಯೇ ಎಲ್ಲೆಲ್ಲೂ ಇತ್ತು. ಆದ್ದರಿಂದ ಅನಂತಕುಮಾರ್ ತಮ್ಮ ಭಾಷಣವನ್ನೆಲ್ಲ ಚಂಪಾರವರಿಗೆ ಉತ್ತರ ಕೊಡಲು ಮೀಸಲಿಟ್ಟರು. ಸಾಹಿತ್ಯ ಸಮ್ಮೇಳನಗಳನ್ನು ರಾಜಕೀಯಕ್ಕೆ ಎಳೆಸಿದ ಬಗ್ಗೆ ಸಂಘಟಕರನ್ನು ತರಾಟೆಗೆ ತೆಗೆದುಕೊಂಡರು. ಕನ್ನಡದ ಜ್ಞಾನ ಪ್ರಸಾರಕ್ಕೆ ಡಿಜಿಟೈಸೇಶನ್ ಒಂದೇ ಪರಿಹಾರ ಎಂದೂ ಸಭೆಗೆ ತಿಳಿಸಿದರು. ಅಂದಹಾಗೆ ೨೦೧೨ರಲ್ಲಿ ಸರ್ಕಾರದ ಎಲ್ಲ ಲೇಖನ ವ್ಯವಹಾರಗಳೂ ಯೂನಿಕೋಡಿನಲ್ಲೇ ಇರಬೇಕು ಎಂಬ ಅಧಿಕೃತ ಸುತ್ತೋಲೆಯ ಪ್ರಕಟಣೆಯಾಗಲೂ ಅನಂತಕುಮಾರ್ ಅವರೇ ಕಾರಣ ಎಂಬುದನ್ನು ಗಮನಿಸಬೇಕು.

ಮುಖ್ಯವಾಗಿ ಅನಂತಕುಮಾರ್ ಪಕ್ಷ ರಾಜಕಾರಣ ಪ್ರವೇಶ ಮಾಡುವ ಮುನ್ನವೇ ನೂರಾರು ಅಭಿಮಾನಿಗಳನ್ನು ಹೊಂದಿದ್ದರು; ತಮ್ಮದೇ ಆದ ಕಾರ್ಯಶೈಲಿಯನ್ನು ರೂಢಿಸಿಕೊಂಡಿದ್ದರು. ಆದರೆ ಅವರ ರಾಜಕಾರಣದ ಇತಿಹಾಸವನ್ನಷ್ಟೇ ಬಿಂಬಿಸಿದರೆ ಅನಂತಕುಮಾರರಿಗೆ ಅನ್ಯಾಯ ಮಾಡಿದಂತೆ. ನನಗಂತೂ ರಾಜಕಾರಣದ ಅನಂತಕುಮಾರರಿಗಿಂತ ಎಬಿವಿಪಿಯ ಅನಂತಕುಮಾರ್ ತುಂಬಾ ಇಷ್ಟ.

ಕೊನೆಯದಾಗಿ.... ಅನಂತಕುಮಾರ್ ಕೊನೆಗಾಲದ ಮೂರ್ನಾಲ್ಕು ತಿಂಗಳುಗಳ ಕಾಲ ಗಾಢ ಮೌನದ ಸನ್ನಿವೇಶವೊಂದನ್ನು ನಾವೆಲ್ಲರೂ ಅನುಭವಿಸಿದೆವು. ಕೇಳಲಾಗದ, ಹೇಳಲಾಗದ ಸ್ಥಿತಿಯಲ್ಲೇ ಕಾಲ ಕಳೆದೆವು. ನಮ್ಮ ಸ್ಥಿತಿಯೇ ಹೀಗಿದ್ದರೆ ಅವರ ಪತ್ನಿ ತೇಜಸ್ವಿನಿಯವರು ಹೇಗೆ ಈ ಸನ್ನಿವೇಶವನ್ನು ಎದುರಿಸಿರಬಹುದು ಎಂದು ಈಗಲೂ ಕಲ್ಪಿಸಲಾಗುತ್ತಿಲ್ಲ. ಈಗ ಅವರು ಮತ್ತು ಅವರ ಮಕ್ಕಳು, ಕುಟುಂಬದ ಎಲ್ಲರೂ ಈ ಶೋಕದ ಕಡಲನ್ನೂ, ಮೌನದ ಕಣಿವೆಯನ್ನೂ ದಾಟಿ, ಅನಂತ-ಅದಮ್ಯ ಚೇತನದ ಹಾದಿಯಲ್ಲೇ ಮುನ್ನಡೆದಿದ್ದಾರೆ. ಅನಂತಕುಮಾರ್ ಹಚ್ಚಿಟ್ಟು ಹೋದ ಕನಸುಗಳ ಹಣತೆ ದೀಪಗಳನ್ನು ಜತನದಿಂದ ಕಾಪಿಟ್ಟು ಮುನ್ನಡೆಯುತ್ತಿದ್ದಾರೆ.

# ಕಲಬುರ್ಗಿ ಜಿಲ್ಲೆಯ ಕೆಲವು ಪುರಾತನ ದೇಗುಲಗಳು



## ದೇಗುಲದರ್ಶನ ಮಾಲಿಕೆ-೩











ದಖನ್ ಪ್ರಸ್ಥಭೂಮಿಯಲ್ಲಿರುವ ಕಲಬುರ್ಗಿ ಪ್ರಾಂತ್ಯದಲ್ಲಿ ಮೌರ್ಯರು, ಶಾತವಾಹನರಾದಿಯಾಗಿ ಅನೇಕ ರಾಜಮನೆತನಗಳು ಆಡಳಿತ ನಡೆಸಿರುವರು.ಪ್ರಸ್ತುತ ನಾವು ಕಲಬುರ್ಗಿ ಜಿಲ್ಲೆಯ ಕಲಬುರ್ಗಿ, ಚಿತ್ತಾಪುರ ಮತ್ತು ಸೇಡಂ ತಾಲೂಕುಗಳ ಕೆಲವು ದೇವಾಲಯಗಳನ್ನು ಪರಿಚಯ ಮಾಡಿಕೊಳ್ಳೋಣ.

ಕಲ್ಬುರ್ಗಿ ಜಿಲ್ಲಾ ಕೇಂದ್ರದಿಂದ ಈಶಾನ್ಯಕ್ಕೆ ೧೫ ಕಿ.ಮೀ ದೂರದಲ್ಲಿರುವ ಹರಸೂರಿನಲ್ಲಿ ಸುಂದರವಾದ ಪಂಚಕೂಟ ಬಸದಿಯಿದೆ.ಪ್ರಧಾನ ಗರ್ಭಗೃಹದಲ್ಲಿ ಪಾರ್ಶ್ವನಾಥ ತೀರ್ಥಂಕರರ ಮೂರ್ತಿಯಿದ್ದು ಉಳಿದ ಗರ್ಭಗೃಹಗಳಲ್ಲಿ ಮಹಾವೀರ ಮತ್ತು ಪ್ರಥಮ ತೀರ್ಥಂಕರ ಆದಿನಾಥರ ಪ್ರತಿಮೆಗಳಿವೆ.ಇಲ್ಲಿರುವ ಪದ್ಮಾವತಿ ಯಕ್ಷಿ ಮತ್ತು ಧರಣೀಂದ್ರ ಯಕ್ಷರ ಮೂರ್ತಿಗಳು ಸುಂದರ ಕಲಾಕೃತಿಗಳು.

ಚಿತ್ತಾಪುರ ತಾಲ್ಲೂಕಿನ ಕಾಳಗಿಯು ದೇವಾಲಯಗಳ ಬೀಡು ,ಇಲ್ಲಿ ಮಲ್ಲಿಕಾರ್ಜುನ, ರೇವಣಸಿದ್ದೇಶ್ವರ, ಸೂರ್ಯನಾರಾಯಣ, ನೀಲಕಂಠ ಕಾಳೇಶ್ವರ, ನರಸಿಂಹ ಮುಂತಾದ ಗುಡಿಗಳಿವೆ. ಸೂರ್ಯನಾರಾಯಣ ಗುಡಿಯ ಹೊರ ಭಿತ್ತಿಯಲ್ಲಿ ಶಿಲಾಬಾಲಕಿಯರ ಸುಂದರ ಶಿಲ್ಪಗಳಿವೆ. ನೀಲಕಂಠ ಕಾಳೇಶ್ವರ ಗುಡಿಯಲ್ಲಿ ಚತುರ್ಮುಖ ಗಣಪತಿಯ ಆಕರ್ಷಕ ಮೂರ್ತಿಯಿರುವುದು.

ಚಿತ್ತಾಪುರ ತಾಲ್ಲೂಕಿನ ಮಂಗಳಗಿಯಲ್ಲಿರುವ ಮಲ್ಲಿಕಾರ್ಜುನ ಗುಡಿಯು ಒಂಬತ್ತನೇ ಶತಮಾನದ ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದು ಮೂಲಸ್ವರೂಪದಂತೆಯೆ ಇರುವುದು ವಿಶೇಷ.ಈ ದೇವಾಲಯದ ಅಂತರಾಳದ ಮುಂದಿರುವ ಸಿಂಹ ಪೀಠವನ್ನು ಹೊಂದಿರುವ ಸ್ಥಂಭಗಳು ಬಹಳ ಆಕರ್ಷಕವಾಗಿವೆ.ಗರ್ಭಗುಡಿಯಲ್ಲಿ ಬೃಹದಾಕಾರದ ಮಲ್ಲಿಕಾರ್ಜುನ ಲಿಂಗವಿದೆ.

ಕಲಬುರಗಿ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಸೇಡಂನಲ್ಲಿ ಕಲ್ಯಾಣ ಚಾಳುಕ್ಯ ಶೈಲಿಯ ಸೂಕ್ಷ್ಮಕೆತ್ತನೆಗಳಿಂದ ಕೂಡಿದ ಪಂಚಲಿಂಗೇಶ್ವರ ಹಾಗೂ ಅದೇ ಕಾಲಘಟ್ಟಕ್ಕೆ ಸೇರುವ ಶಾಂತಿನಾಥ ಬಸದಿಯಿದೆ. ಪಂಚಲಿಂಗೇಶ್ವರ ದೇವಾಲಯದಲ್ಲಿ ಐದು ಗರ್ಭಗುಡಿಗಳಿದ್ದು ಪಂಚ ಶಿವಲಿಂಗಗಳಿವೆ. ಶಾಂತಿನಾಥ ಬಸದಿಯಲ್ಲಿರುವ ಶಾಂತಿನಾಥ, ಪಾರ್ಶ್ವನಾಥ ಮುಂತಾದ ಜಿನ ಬಿಂಬಗಳು ಆಕರ್ಷಕವಾಗಿವೆ.

ಕರ್ನಾಟಕದ ಪ್ರಸಿದ್ಧ ಅರಸುಮನೆತನ ರಾಷ್ಟ್ರಕೂಟರ ರಾಜಧಾನಿ ಮಳಖೇಡ. ಇಲ್ಲಿ ರಾಷ್ಟ್ರಕೂಟರ ಕಾಲದಲ್ಲಿಯೇ ನಿರ್ಮಿಸಿದ ಮಲ್ಲಿನಾಥ ಬಸದಿಯಿದೆ. ಇಲ್ಲಿರುವ ಪಾರ್ಶ್ವನಾಥ ಹಾಗೂ ನೇಮಿನಾಥರ ಮೂರ್ತಿಗಳು ಒಂಬತ್ತನೆಯ ಶತಮಾನಕ್ಕೆ ಸೇರಿದ್ದು ಬಹಳ ಆಕರ್ಷಕವಾಗಿವೆ.


ಕರ್ನಾಟಕದ ಒಂದು ಪ್ರಾಚೀನ ವಿದ್ಯಾಕೇಂದ್ರವಾದ ನಾಗಾವಿ (ನಾಗಾಯಿ)ಯಲ್ಲಿ ಅನೇಕ ಪುರಾತನ ದೇವಾಲಯಗಳಿದ್ದು ,ಬಹಳಷ್ಟು ದೇವಾಲಯಗಳು ವಿನಾಶದ ಅಂಚಿನಲ್ಲಿವೆ. ಇಲ್ಲಿರುವ ಅರವತ್ತು ಕಂಭಗಳ ಗುಡಿಯಲ್ಲಿ ಒಂದೇ ಪಾಣಿಪೀಠದ ಮೇಲೆ ತ್ರಿಮೂರ್ತಿಗಳನ್ನು ಲಿಂಗರೂಪದಲ್ಲಿ ಆರಾಧಿಸಲಾಗುತ್ತಿದೆ. ಇಲ್ಲಿರುವ ಎಲ್ಲಮ್ಮನ ಗುಡಿಯು ಜಿಲ್ಲೆಯ ಪ್ರಸಿದ್ಧ ಶಕ್ತಿ ಕೇಂದ್ರಗಳಲ್ಲೊಂದು.

ಭಂಕೂರಿನಲ್ಲಿ ತ್ರಿಕೂಟ ಜೈನಬಸದಿಯಿದ್ದು ರಾಷ್ಟ್ರಕೂಟರ ಕಾಲಕ್ಕೆ ಸೇರಿರುವ ಶಾಂತಿನಾಥ, ಮಹಾವೀರ ಹಾಗೂ ಪಾರ್ಶ್ವನಾಥ ಬಿಂಬಗಳನ್ನು ಇಲ್ಲಿ ದರ್ಶನಮಾಡಬಹುದಾಗಿದೆ .

**ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ವೀಕ್ಷಿಸಿ**

**http://YouTube.com/AnanthkumarPratishthana**





ಸಸ್ಯಲೋಕ ಪರಿಚಯ ಮಾಲಿಕೆ - 2

# ನೆಲ್ಲಿಯ ಕಾಯಿ

ಕಾಡಿನಲ್ಲಿ ಬೇಸಿಗೆಯ ಕಾಲವೆಂದರೆ ಪ್ರಾಣಿಗಳಿಗೆ ಸಂಕಷ್ಟದ ಕಾಲವೇ ಸರಿ. ಅದರಲ್ಲೂ ಆನೆ, ಜಿಂಕೆಗಳಂಥ ಸಸ್ಯಾಹಾರಿ ಪ್ರಾಣಿಗಳಿಗೆ ಒಣಕಾಡುಗಳಲ್ಲಿ ಆಹಾರ ಸಿಗುವುದೇ ದುರ್ಲಭ. ಬೇಸಗೆಯ ಹೊತ್ತಿಗೆ ಮರಿ ಹಾಕಿರುವ ಜಿಂಕೆಗಳಿಗೆ ಪೌಷ್ಠಿಕಾಂಶಗಳು ಅತ್ಯವಶ್ಯಕ. ಇಂಥ ಸನ್ನಿವೇಶದಲ್ಲಿ ಜಿಂಕೆಗಳಿಗೆ ಪೌಷ್ಠಿಕ ಆಹಾರವನ್ನು ಒದಗಿಸುವ ಹೊಣೆಯನ್ನು ನಿರ್ವಹಿಸುವುದು ಯಾರು ಗೊತ್ತೇ? ಕಾಡಿನೆಲ್ಲೆಡೆ ಫಲತುಂಬಿ ಬೆಳೆದು ನಿಂತ ನೆಲ್ಲಿಯ ಮರಗಳು!

ಈ ಗಿಡವು ಹೆಚ್ಚಾಗಿ ಮಲೆನಾಡಿನ ಬೆಟ್ಟಪ್ರದೇಶದಲ್ಲಿ ಕಂಡುಬರುತ್ತದೆ. ಆದ್ದರಿಂದ ಇದನ್ನು ಬೆಟ್ಟದ ನೆಲ್ಲಿಕಾಯಿ ಎಂದು ಆಡುಮಾತಿನಲ್ಲಿ ಕರೆಯುವ ರೂಢಿ ಇದೆ. ಬೆಟ್ಟದ ನೆಲ್ಲಿಕಾಯಿ ಮರ (ಇಂಡಿಯನ್ ಗೂಸ್ ಬೆರಿ) ಸಸ್ಯಶಾಸ್ತ್ರೀಯ ಹೆಸರು - ಫಿಲ್ಯಾಂಟಸ್ ಎಂಬ್ಲಿಕಾ. ಬೆಟ್ಟದ ನೆಲ್ಲಿಕಾಯಿಮರವು ಔಷಧೀಯ ಅಂಶಗಳನ್ನು ತುಂಬಿಕೊಂಡಿರುವ ಒಂದು ಅದ್ಭುತ ಮರ. ಸಸ್ಯಮೂಲ - ಭಾರತ. ನೆಲ್ಲಿಕಾಯಿಮರವು ಫೋರ್ಬಿಯಾಸಿಯಾ ಕುಟುಂಬಕ್ಕೆ ಸೇರಿದೆ. ಗಿಡವು ಚಳಿಗಾಲದ ಸಮಯದಲ್ಲಿ ಕಾಯಿ ಬಿಡುತ್ತದೆ. ಗಿಡಗಳಲ್ಲಿ ಅಕ್ಟೋಬರ್ ತಿಂಗಳಿಂದ ಜನವರಿಯವರೆಗೂ ನೆಲ್ಲಿಕಾಯಿಗಳನ್ನು ಕಾಣಬಹುದು.

ಭಾರತದ ತೇವಯುಕ್ತ ಹವೆಯುಳ್ಳ ಗುಡ್ಡಗಾಡು ಹಾಗೂ ಕಾಡುಗಳ ಪರಿಸರವು ನೆಲ್ಲಿಕಾಯಿ ಮರಗಳ ಸಹಜ ಬೆಳವಣಿಗೆಗೆ ಬಹಳ ಸಹಾಯಕವಾಗಿದೆ. ಹಾಗಾಗಿ ನೆಲ್ಲಿಯ ಗಿಡಗಳು ಉತ್ತರ ಪ್ರದೇಶ, ಜಾರ್ಖಂಡ್, ಛತ್ತೀಸಗಢ್ ,ಹಿಮಾಲಯದ ತಪ್ಪಲು , ಹಾಗೂ ಪಶ್ಚಿಮ ಘಟ್ಟಗಳು ಇಲ್ಲೆಲ್ಲಾ ಸ್ವಾಭಾವಿಕವಾಗಿ ಬೆಳೆಯುತ್ತವೆ.

**ಪೌರಾಣಿಕ ಹಿನ್ನೆಲೆ:**

ನೆಲ್ಲಿಕಾಯಿ ಮರದಲ್ಲಿ ಶಿವನು ವಾಸವಾಗಿದ್ದಾನೆ ಎಂದು ಹೇಳುತ್ತಾರೆ. ಹಾಗಾಗಿಯೇ ಈ ಗಿಡವನ್ನು ಪವಿತ್ರ ವೃಕ್ಷವೆಂದು ಪೂಜೆ ಮಾಡುತ್ತಾರೆ . ಕಾರ್ತೀಕಮಾಸದಲ್ಲಿ ತುಳಸಿವಿವಾಹ ಹಬ್ಬಕ್ಕೆ ತುಳಸಿ ಗಿಡದೊಂದಿಗೆ ಬೆಟ್ಟದ ನೆಲ್ಲಿಕಾಯಿ ಗಿಡವನ್ನು ನೆಟ್ಟು ಪೂಜಿಸುವ ರೂಢಿ ಇದೆ.

ಆದಿ ಶಂಕರಾಚಾರ್ಯರು ತಮಗೆ ನೆಲ್ಲಿಕಾಯಿಯ ಭಿಕ್ಷೆ ನೀಡಿದ ಬಡವಿ ತಾಯಿಗೆ ಸಹಾಯ ಮಾಡಲೆಂದು ಚಿನ್ನದ ನೆಲ್ಲಿಕಾಯಿಗಳ ಮಳೆಗರೆಯುತ್ತಾರೆ. ಆ ಮಹಾಸ್ತೋತ್ರವೇ "ಕನಕಧಾರಾ ಸ್ತೋತ್ರ" ವೆಂದು ಪ್ರಸಿದ್ಧವಾಗಿದೆ. ಬೆಂಗಳೂರಿನ ಪ್ರಸಿದ್ಧ ಗಿರಿಧಾಮ ನಂದಿಬೆಟ್ಟದಲ್ಲಿ ಸುಮಾರು ೧೦೦೦ ವರ್ಷಗಳಷ್ಟು ಪುರಾತನ ಬಸವಣ್ಣನ ಗುಡಿಯಿದೆ. ಈ ಬಸವಣ್ಣನಿಗೆ"ನೆಲ್ಲಿಕಾಯಿ ಬಸವಣ್ಣ"" ಎಂದು ಹೆಸರು. ನೆಲ್ಲಿಕಾಯಿ ಗಿಡ ನೆಡುವುದರಿಂದ ವಾಸ್ತು ದೋಷ ಪರಿಹಾರ ಹಾಗೂ ಪೂಜಿಸಿದರೆ ಮನೆಯಲ್ಲಿ ಸುಖ, ಶಾಂತಿ ಉಂಟಾಗುತ್ತದೆ ಎಂದು ಹಿರಿಯರು ಹೇಳುತ್ತಾರೆ.

**ನೆಲ್ಲಿ ಮರದ ವಿಶೇಷ ಗುಣ :**

ಕಾಡಿನಲ್ಲಿ ನೆಲ್ಲಿ ತಾನೊಂದೇ ಮರವಾಗಿ ಬೆಳೆಯುವುದಿಲ್ಲ, ಸುತ್ತಲೂ ಮತ್ತಿ, ಹೊನ್ನೆ, ಕಿಂದಳ, ಕೌಲು, ಕಾರೆ, ಹಿಪ್ಪೆ ಮುಂತಾದ ಗಿಡ ಗೆಳೆಯರು ಬೇಕು. ಸರಳವಾಗಿ ಹೇಳುವುದಾದರೆ ಬೇರೆ ಮರಗಳ ಜೊತೆ ಮಾತಾಡುತ್ತಿದ್ದರೆ ಇದು ಆರೋಗ್ಯವಂತ!

ಹಾಗಾಗಿಯೇ ಹೊಲ ತೋಟಗಳಲ್ಲಿ ನೆಲ್ಲಿ ಮರವನ್ನು ಒಂದೇ ಜಾತಿಯಾಗಿ ಬೆಳೆಸದೇ ಪೇರಲ ,ನೇರಳೆ, ಸೀತಾಫಲ ಮುಂತಾದ ಬೇರೆ ಬೇರೆ ಜಾತಿಯ ಸಸಿಗಳೊಂದಿಗೆ ಬೆಳೆಸಿದರೆ ಹಾಗೂ ಸರಿಯಾದ ವಾತಾವರಣ ಹಾಗೂ ಅನುಕೂಲ ಸಿಕ್ಕರೆ ಅದು ನೂರಾರು ವರ್ಷಗಳವರೆಗೆ ಬದುಕುತ್ತದೆ.

**ನೆಲ್ಲಿಕಾಯಿಯ ಔಷಧೀಯ ಗುಣಗಳು :**

ನೆಲ್ಲಿ ಅಥವಾ ಆಮ್ಲಾ ಪೋಷಕಾಂಶಗಳ ಶಕ್ತಿಮೂಲ . ಅತ್ಯಧಿಕ ವಿಟಮಿನ್ ಸಿ ಹೊಂದಿರುವ ನೆಲ್ಲಿ ಕಬ್ಬಿಣಾಂಶದ ಆಗರವೂ ಆಗಿದೆ. ಸಣ್ಣ ದೊಡ್ಡ ಆರೋಗ್ಯ ಸಮಸ್ಯೆಗಳ ನಿವಾರಣೆಗೆ ನೆಲ್ಲಿ ದಿವ್ಯ ಔಷಧಿಯಾಗಿ ಬಳಸಲ್ಪಡುತ್ತದೆ.

ನೆಲ್ಲಿಕಾಯಿಯು ಕಿತ್ತಳೆ ಹಣ್ಣಿಗಿಂತ 20 ಪಟ್ಟು ಹೆಚ್ಚು "ಸಿ" ಜೀವಸತ್ವವನ್ನು ಹೊಂದಿರುತ್ತದೆ. ನೆಲ್ಲಿಕಾಯಿಯ ಗಿಡದ ಬೇರು, ಎಲೆ, ಕಾಯಿ ಎಲ್ಲವೂ ಔಷಧೀಯ ಗುಣಗಳನ್ನು ಹೊಂದಿವೆ. ನೆಲ್ಲಿಕಾಯಿಯ ನಿರಂತರ ಸೇವನೆ ಹೃದಯದ ರೋಗಗಳನ್ನು ತಡೆಯುತ್ತದೆ.ಹಾಗೂ ಹೃದಯದ ಸ್ನಾಯುಗಳನ್ನು ಬಲಗೊಳಿಸುತ್ತದೆ. ಇದರಲ್ಲಿನ ಕಬ್ಬಿಣದ ಅಂಶವು ಹೊಸ ಕೆಂಪು ರಕ್ತ ಕಣಗಳ ಸೃಷ್ಟಿಗೆ ಉತ್ತೇಜನ ನೀಡುತ್ತದೆ.

ನೆಲ್ಲಿಕಾಯಿಗಳು ಮಾನವ ಶರೀರವನ್ನು ಸೋಂಕಿನಿಂದ ರಕ್ಷಿಸುತ್ತವೆ ಮತ್ತು ದೇಹದ ಪ್ರತಿರಕ್ಷಣಾ ಪ್ರತಿಕ್ರಿಯೆಯನ್ನು ಸುಧಾರಿಸುತ್ತದೆ. ನೆಲ್ಲಿಕಾಯಿ ವಿಟಮಿನ್ ಸಿ ನ ಒಂದು ಉತ್ತಮ ಮೂಲ. ನೆಲ್ಲಿಕಾಯಿಯ ಸೇವನೆಯು ಗ್ಯಾಸ್ಟ್ರಿಕ್ ಸಿಂಡ್ರೋಮ್ ಸಂಬಂಧಿತ ಅನಾರೋಗ್ಯದಲ್ಲಿ ಹೆಚ್ಚಿನ ಪರಿಹಾರವನ್ನು ನೀಡುತ್ತದೆ. ಅಸ್ವಸ್ಥತೆಯನ್ನು ಉಂಟುಮಾಡುವ ಹಾನಿಕಾರಕ ಪದಾರ್ಥಗಳನ್ನು ಚದುರಿಸಲು ವಿರೇಚಕವಾಗಿ ಸಹಾಯ ಮಾಡುತ್ತದೆ. ಸಿ' ಜೀವಸತ್ವದ ಗಣಿಯಾಗಿರುವ ನೆಲ್ಲಿಕಾಯಿಯ ಸೇವನೆ ಮೆದುಳಿಗೆ ಉತ್ತಮ ತ್ರಾಣಿಕದಂತೆ ಕೆಲಸ ಮಾಡುತ್ತದೆ.

ಕೂದಲು ಉದುರುವಿಕೆ, ನೆಗಡಿ, ಉಬ್ಬಸ, ಕ್ಷಯ, ದೃಷ್ಟಿದೋಷ, ಆಮಶಂಕೆ, ಅಕಾಲಮುಪ್ಪು, ಮಧುಮೇಹ, ಬಾಲನೆರೆ- ಇತ್ಯಾದಿ ಹಲವಾರು ಸಮಸ್ಯೆಗಳಿಗೆ ನೆಲ್ಲಿಕಾಯಿಯ ಸೇವನೆಯಿಂದ ಬಹಳ ಪ್ರಯೋಜನ ಕಾಣಬಹುದು. ನೆಲ್ಲಿಕಾಯಿಯ ಸೇವನೆ ಜೀರ್ಣಶಕ್ತಿಯನ್ನು ಸುಧಾರಿಸುತ್ತದೆ.

ನೆಲ್ಲಿಕಾಯಿಯನ್ನು ಒಣಗಿಸಿ ಅಡಿಕೆ, ಉಪ್ಪಿನಕಾಯಿ ಮಾಡುವ ಮೂಲಕ ಕೂಡಾ ಸೇವಿಸಬಹುದು. ನೆಲ್ಲಿಕಾಯಿ ರಸವನ್ನು ಜೇನಿನೊಂದಿಗೆ ಸೇರಿಸಿ ತಿನ್ನಬಹುದು. ಖಾಲಿ ಹೊಟ್ಟೆಯಲ್ಲಿ ನೆಲ್ಲಿಕಾಯಿ ತಿನ್ನುವುದು ಆರೋಗ್ಯಕ್ಕೆ ಉತ್ತಮ. ದೇಹದ ತೂಕ ನಿರ್ವಹಣೆಗೆ ನೆಲ್ಲಿಕಾಯಿ ಮತ್ತು ನೆಲ್ಲಿಕಾಯಿಯ ರಸ ಉಪಯುಕ್ತವಾಗಿದೆ.



ಛಾಯಾ ಓಕ್ ಬಾಪಟ್

ಇಷ್ಟೊಂದು ಉಪಕಾರಿಯಾಗಿರುವ ನೆಲ್ಲಿಕಾಯಿ ಗಿಡವನ್ನು ಇಂದೇ ನಾವು ನಮ್ಮ ಮನೆಗಳಲ್ಲಿ, ಹೊಲ ತೋಟಗಳಲ್ಲಿ ನೆಟ್ಟು ಬೆಳೆಸೋಣ..

# ಕನ್ನಡದ ಅನರ್ಘ್ಯ ರತ್ನ - ಅನಂತಕುಮಾರ್

ಪುಟ 2 ರಿಂದ ಭೇಟಿಯಾಗಲು ಅವರು ನಿರುತ್ಸಾಹ ತೋರಿಸಿದ್ದರು. ಆದರೆ ಅನಂತಕುಮಾರರು ಅವರನ್ನು ಭೇಟಿಯಾದಾಗ ಅವರೊಡನೆ ಕೇವಲ ಕುವೆಂಪು ಸಾಹಿತ್ಯದ ಬಗ್ಗೆಯೇ ಮಾತನಾಡಿ ಅವರನ್ನು ಅಚ್ಚರಿಗೊಳಿಸಿದ್ದರು. ಇದನ್ನು ಆ ಸಾಹಿತಿಯೇ ಹೇಳಿಕೊಂಡು ನಂತರ ಅನಂತಕುಮಾರರನ್ನು ಸನ್ಮಾನಿಸಲು ಬಯಸಿದ್ದರು. ಕನ್ನಡ ಸಾಹಿತ್ಯದಲ್ಲಿ ಉತ್ತಮವಾದ ಜ್ಞಾನವನ್ನು ಹೊಂದಿದ್ದ ಅವರು ತಮ್ಮ ಭಾಷಣಗಳಲ್ಲಿ ಸಾಹಿತ್ಯಕ ವಿಷಯಗಳನ್ನು ನಿರರ್ಗಳವಾಗಿ ಪ್ರಸ್ತಾಪ ಮಾಡುತ್ತಿದ್ದರು.

ಕನ್ನಡಕ್ಕಾಗಿ ದುಡಿದ ಮಹನೀಯರ ಹೆಸರನ್ನು ಅಜರಾಮರಗೊಳಿಸುವ ನಿಟ್ಟಿನಲ್ಲಿ ನಗರದ ಎಲ್ಲಾ ಉದ್ಯಾನವನಗಳಿಗೆ ಅವರ ಹೆಸರುಗಳನ್ನಿಟ್ಟು ಸಂಸದರ ಅಭಿವೃದ್ಧಿನಿಧಿಯನ್ನು ಬಳಸಿ ಅವುಗಳನ್ನು ಅಭಿವೃದ್ಧಿ ಪಡಿಸಿದರು. ಅನೇಕ ರಸ್ತೆಗಳಿಗೆ ಸಾಹಿತಿಗಳ, ಇತಿಹಾಸ ಪುರುಷರ ಹೆಸರುಗಳನ್ನು ಇಡಿಸಿದರು.

ಕನ್ನಡ ಚಳುವಳಿಗಾರರೆಂದರೆ ಅನೇಕರಿಗೆ ಅಸಡ್ಡೆ. ಆದರೆ ಅನಂತಕುಮಾರರು ಚಳುವಳಿಗಾರರ ಮಹತ್ವವನ್ನು ಅರಿತಿದ್ದರು. ಹೀಗಾಗಿ ಚಳುವಳಿಗಾರರು ಬಂಧನಕ್ಕೊಳಗಾದ ಎಲ್ಲಸಂದರ್ಭಗಳಲ್ಲಿಯೂ ಅವರ ಪರವಾಗಿ ನಿಲ್ಲುತ್ತಿದ್ದರು. . "ಈ ಚಳುವಳಿಗಾರರನ್ನು ಯಾಕೆ ಬಂಧಿಸುತ್ತೀರಿ, ಅವರು ಯಾರಿಗೋಸ್ಕರ ಹೋರಾಟ ಮಾಡುತ್ತಿದ್ದಾರೆ ಎಂದು ಯೋಚಿಸಿ. ಅದನ್ನು ನಾವು ನೀವು ಮಾಡುತ್ತೇವೆಯೇ? ಅವರನ್ನು ಕೈ ಕಟ್ಟಿ ಕುಳ್ಳಿರಿಸುವುದು ನ್ಯಾಯವಲ್ಲ. ಕನ್ನಡದ ವಿಷಯದಲ್ಲಿ ನಮಗೆ ಯಾರಿಗೂ ಇಲ್ಲದ ಬದ್ಧತೆ ಅವರಲ್ಲಿದೆ" ಎಂದು ವಾದಿಸಿ ಚಳುವಳಿಗಾರರ ಮೇಲಿನ ಮೊಕದ್ದಮೆಗಳನ್ನು ಹಿಂತೆಗೆಯುವಂತೆ ಮಾಡಿ ಅವರು ನ್ಯಾಯಾಲಯಗಳಿಗೆ ನಿರಂತರವಾಗಿ ಅಲೆದಾಡುವುದನ್ನು ತಪ್ಪಿಸಿದ್ದಾರೆ.

ಎಲ್ಲ ಕೇಂದ್ರೀಯ ನಾಯಕರು ಕರ್ನಾಟಕದಲ್ಲಿ ಭಾಷಣ ಮಾಡುವಾಗ ಅನಂತಕುಮಾರರು ಅವರ ಮಾತುಗಳನ್ನು ಕನ್ನಡದಲ್ಲಿ ಸಮರ್ಥವಾಗಿ ಅನುವಾದ ಮಾಡುತ್ತಿದ್ದುದು ಎಲ್ಲರಿಗೂ ತಿಳಿದೇ ಇದೆ.

ಕನ್ನಡ ನೆಲ ಜಲದ ವಿಷಯದಲ್ಲಿಯೂ ಅನಂತಕುಮಾರರು ನಿರಂತರವಾಗಿ ಜಾಗೃತರಾಗಿದ್ದು ಕನ್ನಡಕ್ಕೆ ಅನ್ಯಾಯವಾಗಬಹುದಾಗಿದ್ದ ಸಂದರ್ಭಗಳನ್ನು ತಪ್ಪಿಸಿದ್ದಾರೆ. ಕಾವೇರಿ ಜಲ ವಿವಾದ ಮತ್ತು ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸುವ ವಿಚಾರದಲ್ಲಿ ಅನಂತಕುಮಾರರ ಪಾತ್ರವನ್ನು ರಾಜ್ಯಸರಕಾರವೇ ಪ್ರಶಂಸಿಸಿದೆ. ಬೆಂಗಳೂರಿನಲ್ಲಿ ಮೆಟ್ರೋ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಕರ್ನಾಟಕದಲ್ಲಿ ಸುವರ್ಣ ಚತುಷ್ಪಥ ನಿರ್ಮಾಣಗಳಲ್ಲಿಯೂ ಅವರ ಪಾತ್ರ ಹಿರಿದು. ಇವುಗಳ ಬಗ್ಗೆಯೇ ಒಂದು ವಿಶೇಷ ಲೇಖನ ಬರೆಯಬಹುದು. ಕಳಸ ಬಂಡೂರಿ ಯೋಜನೆಗೆ ಅರಣ್ಯ ಇಲಾಖೆಯಿಂದ ಮತ್ತು ಬೆಂಗಳೂರಿನಲ್ಲಿ ವರ್ತುಲ ರಸ್ತೆಗಳ ನಿರ್ಮಾಣಕ್ಕೆ ರಕ್ಷಣಾ ಇಲಾಖೆಯಿಂದ ಭೂಮಿಯನ್ನು ಕೊಡಿಸಲು ಅನಂತಕುಮಾರರ ಪ್ರಭಾವೇ ಕಾರಣ.

ಧಾರವಾಡದಲ್ಲಿ ಐಐಟಿ ಸ್ಥಾಪನೆಯಾಗಲು ಅನಂತಕುಮಾರರು ವಹಿಸಿದ ಶ್ರಮವನ್ನು ಪ್ರಹ್ಲಾದ್ ಜೋಷಿ ನೆನಪಿಸಿಕೊಳ್ಳುತ್ತಾರೆ. ಉಡಾನ್ ಯೋಜನೆಯ ನಕ್ಷೆಯಲ್ಲಿ ಉತ್ತರ ಕರ್ನಾಟಕವನ್ನು ಸೇರಿಸಿದ ಹಿರಿಮೆ ಅವರದು. ಹುಬ್ಬಳ್ಳಿಯಲ್ಲಿ ಪ್ರತ್ಯೇಕ ರೈಲ್ವೇ ವಲಯ ಸ್ಥಾಪನೆಯಾಗಲೂ ಅನಂತಕುಮಾರರೇ ಕಾರಣ. ಇವೆಲ್ಲ ಪ್ರಯತ್ನಗಳ ಫಲವಾಗಿ ಕನ್ನಡಿಗರಿಗೆ ಉದ್ಯೋಗಾವಕಾಶಗಳು ಹೆಚ್ಚಿದವು ಎಂದು ಬೇರೆ ಹೇಳಬೇಕಾಗಿಲ್ಲ.

ಈ ರೀತಿಯಾಗಿ ರಾಷ್ಟ್ರ ರಾಜಕಾರಣದ ಔನ್ನತ್ಯದಲ್ಲಿದ್ದಾಗಲೂ ತನ್ನ ಬೇರುಗಳನ್ನು ಮರೆಯದೆ ಕನ್ನಡದ ನಾಡು, ನೀರು, ನುಡಿಗಳಿಗಾಗಿ ನಿಷ್ಠೆಯಿಂದ ಪರಿಶ್ರಮಿಸಿದ ಅನಂತಕುಮಾರರು ಕನ್ನಡದ, ಕನ್ನಡ ನಾಡಿನ ಅನರ್ಘ್ಯ ರತ್ನ.

# ಔಷಧ ರಹಿತ ಜೀವನ

ಡಾ. ಸಿ ಎನ್. ಕೃಷ್ಣ ಗುರೂಜಿ
ಅಧ್ಯಕ್ಷರು, ಓಂ ಸೇವಾ ಕೇಂದ್ರ, ಬೆಂಗಳೂರು

ಪುಟ 3 ರಿಂದ ಅದರ ಬದಲಿಗೆ ಎರಡು ಚಮಚ ಅರಿಶಿಣ, ಅರ್ಧ ಚಮಚ ಸಕ್ಕರೆ ಮತ್ತು ಒಂದು ತೊಗರಿಬೇಳೆಯಷ್ಟು ಗಾತ್ರದ ಸುಣ್ಣ ತೆಗೆದುಕೊಂಡು ಮೂರನ್ನೂ ನೀರಿನೊಂದಿಗೆ ಕಲೆಸಿ. ಈ ಮಿಶ್ರಣವನ್ನು ಮಂಡಿಯ ಸುತ್ತ ಹಚ್ಚಿಕೊಳ್ಳಿ. ಸಾಯಂಕಾಲ ಹಚ್ಚಿಕೊಂಡು ಸುಮಾರು ಎಂಟು ಗಂಟೆ ಹಾಗೆಯೇ ಬಿಡಿ. ಬೆಳಿಗ್ಗೆ ಸ್ನಾನ ಮಾಡುವಾಗ ಸಾಬೂನು ಹಾಕಿ ತೊಳೆದುಕೊಳ್ಳಿ. ಹೀಗೆ ಮಾಡುವುದರಿಂದ ಮಂಡಿಯಲ್ಲಿ ಒಳ್ಳೆಯ ಲೂಬ್ರಿಕೇಶನ್ ಆಗುತ್ತದೆ. ಅರಿಶಿಣ, ಸುಣ್ಣ ಮತ್ತು ಸಕ್ಕರೆಯ ಮಿಶ್ರಣಕ್ಕೆ ಅಷ್ಟೊಂದು ಶಕ್ತಿಯಿದೆ.

ನಮ್ಮಅಡುಗೆ ಮನೆಯೇ ನಮ್ಮ ಆಸ್ಪತ್ರೆ. ಶೇಕಡ 75ರಷ್ಟು ಸಮಸ್ಯೆಗಳಿಗೆ ಅಡುಗೆ ಮನೆಯಲ್ಲಿಯೇ ಔಷಧಗಳಿವೆ. ಅವುಗಳನ್ನು ಹೇಗೆ ಉಪಯೋಗಿಸಬೇಕು ಎನ್ನುವುದು ನಮಗೆ ಗೊತ್ತಿರಬೇಕು. ನಡೆಯುವುದು ನಮಗೆ ಮರೆತೇ ಹೋಗಿದೆ. ಹಳ್ಳಿಗಳಲ್ಲಿ ನಡೆಯುವುದು, ನೀರು ಸೇದುವುದು, ಬಟ್ಟೆ ಒಗೆಯುವುದು ಸಾಮಾನ್ಯ. ಅಡುಗೆ ಮಾಡುವಾಗ ಊದುಗೊಳವೆಯಲ್ಲಿ ಊದುತ್ತಿದ್ದರು. ಇಂದು ಅದನ್ನೇ ನಾವು ಇಂದು ಭಸ್ತ್ರಿಕಾ ಪ್ರಾಣಾಯಾಮ ಎಂದು ಮಾಡುತ್ತೇವೆ. ದಿನಚರಿಯಲ್ಲಿಯೇ ಅಡಕವಾಗಿರುವ ಸಹಜ ವ್ಯಾಯಾಮಗಳನ್ನು ನಾವು ಮರೆತಿದ್ದೇವೆ.

ಮಧುಮೇಹವು ನಮ್ಮ ದೇಶದಲ್ಲಿ ಇಂದು ಬಹಳ ವ್ಯಾಪಕವಾಗಿರುವ ಕಾಯಿಲೆ. ಸಕ್ಕರೆ ಕಾಯಿಲೆ ಕಾಣಿಸಿಕೊಂಡ ಕೂಡಲೆ ಅನ್ನವನ್ನು ನಿಲ್ಲಿಸಿ ಗೋಧಿ ಬಳಸಲು ಪ್ರಾರಂಭಿಸುತ್ತಾರೆ. ವೈದ್ಯರು ಸಲಹೆ ಮಾಡಿದ್ದಾರೆ ಎಂದು ಪ್ರತಿದಿನ ಐದಾರು ಕಿಲೋಮೀಟರ್ ವಾಕಿಂಗ್ ಮಾಡುತ್ತಾರೆ. ಇದು ಸರಿಯಾದ ಕ್ರಮವಲ್ಲ. ಕಾಯಿಲೆ ಬಂದಿರುವ ವ್ಯಕ್ತಿಯ ಹಿನ್ನೆಲೆ ಏನು? ಅವರು ಗಂಡಸೆ ಅಥವ ಹೆಂಗಸೆ? ಅವರ ಕುಟುಂಬದಲ್ಲಿ ಅದೇ ಕಾಯಿಲೆ ಬೇರೆ ಯಾರಿಗಾದರೂ ಇದೆಯೆ? ಅವರ ಆಹಾರ ಪದ್ಧತಿ ಏನು? ಅವರು ಎಷ್ಟು ವಿಶ್ರಾಂತಿ ಪಡೆಯುತ್ತಾರೆ? ಅವರು ಕೆಲಸ ಮಾಡುವ ವೇಳೆ ಯಾವುದು? ಮುಂತಾದವುಗಳನ್ನೆಲ್ಲ ಕೇಳಿ ತಿಳಿದು ನಂತರ, ಎಷ್ಟು ವಾಕಿಂಗ್ಮಾಡ ಬೇಕು, ಇನ್ನೇನೇನು ಮಾಡಬೇಕು ಎಂಬ ಪಟ್ಟಿಯನ್ನು ವೈದ್ಯರು ನೀಡಬೇಕು. ಆದರೆ ಇಂದು ಯಾವ ವೈದ್ಯರಿಗೂ ಇಷ್ಟೊಂದು ವೇಳೆಯಿಲ್ಲ. ಕಾಯಿಲೆ ಬಂದಿದೆಯೆ? ಈ ಮಾತ್ರೆ ತೆಗೆದುಕೊಳ್ಳಿ, ಈ ಮಾತ್ರೆ ಕೆಲಸ ಮಾಡದಿದ್ದರೆ ಇನ್ನೊಂದು ತೆಗೆದುಕೊಳ್ಳಿ ಎಂದು ರೋಗಿಯ ಕಾಯಿಲೆಯ ಜೊತೆ ಪ್ರಯೋಗ ನಡೆಸುತ್ತಾರೆ.

ನಮ್ಮನ್ನು ನಾವೇ ಪರಿಶೀಲಿಸಿಕೊಳ್ಳುವ ವ್ಯವಸ್ಥೆಯನ್ನು ರೂಢಿಸಿಕೊಳ್ಳಬೇಕು. ಪ್ರತಿ ದಿನ ಅರ್ಧಗಂಟೆ ಆತ್ಮೀಯರ ಜೊತೆ ಸಮಯ ಕಳೆಯಿರಿ, ಸ್ವಲ್ಪವಾದರೂ ಸಮಯವನ್ನು ನಿಮಗಾಗಿ ಮೀಸಲಾಗಿಡಿ. ನಮ್ಮ ದೈನಂದಿನ ಚಟುವಟಿಕೆಗಳನ್ನು ನಾವೇ ವಿಶ್ಲೇಷಣೆ ಮಾಡಿಕೊಂಡರೆ ನಮ್ಮ ಮಾನಸಿಕ ಆರೋಗ್ಯವು ಶೇಕಡ ೭೫ ಕ್ಕಿಂತ ಹೆಚ್ಚು ಸುಧಾರಿಸುತ್ತದೆ. ನಮ್ಮಲ್ಲಿ ದೈಹಿಕವಾಗಿ ಏನು ವ್ಯತ್ಯಾಸವಾಗಿದೆ ಎಂದೂ ನಮಗೆ ಗೊತ್ತಾಗುತ್ತದೆ. ಫಾಸ್ಟ್ ಫುಡ್, ಜಂಕ್ ಫುಡ್ ಕಾಲವಿದು. ಮೊಬೈಲಿನ ಮೂಲಕ ಆರ್ಡರ್ ಕೊಟ್ಟರೆ ಬೇಕಾದ ತಿನಿಸುಗಳು ಮನೆ ಬಾಗಿಲಿಗೆ ಬರುತ್ತವೆ. ಇವುಗಳನ್ನು ತಿನ್ನಲೂ ಒಂದು ಮಿತಿಯಿರಲಿ. ನಿಮ್ಮ ತಂದೆ, ತಾತ ಯಾವ ಆಹಾರವನ್ನು ತಿನ್ನುತ್ತಿದ್ದರು ಎಂಬುದನ್ನು ಗಮನಿಸಿ ಅದೇ ಆಹಾರವನ್ನು ಎಷ್ಟು ಬೇಕಾದರೂ ತಿನ್ನಿ. ಮಧುಮೇಹದ ರೋಗಿಗಳು ಅನ್ನವನ್ನು ಸಂಪೂರ್ಣವಾಗಿ ನಿಲ್ಲಿಸಬಾರದು. ಪಾತ್ರೆಯಲ್ಲಿ ಅನ್ನ ಮಾಡಿ ಅದನ್ನು ಬಸಿದು ತಿನ್ನಬೇಕು. ಬಸಿದ ಅನ್ನದಿಂದ ಮಧುಮೇಹ ರೋಗಿಗಳಿಗೆ ಯಾವ ತೊಂದರೆಯೂ ಇಲ್ಲ. ಗೋಧಿಯು ಮಧುಮೇಹಿಗಳ ಆರೋಗ್ಯಕ್ಕೆ ನಿಜವಾಗಿಯೂ ಹಾನಿಕರ. ಬಹಳಷ್ಟು ಜನರಿಗೆ ಇದು ಗೊತ್ತಿಲ್ಲ.

ಬೆಳಗ್ಗೆ ಎದ್ದ ಕೂಡಲೆ ಹಲ್ಲುಉಜ್ಜುವುದಕ್ಕಿಂತ ಮೊದಲು ಸ್ವಲ್ಪ ಬೆಲ್ಲವನ್ನು ತಿಂದು ಬಿಸಿನೀರು ಕುಡಿಯಿರಿ. ಜೀರ್ಣಾಂಗಕ್ಕೆ ಸಂಬಂಧ ಪಟ್ಟ ಶೇ ೭೫ ರಷ್ಟು ಕಾಯಿಲೆಗಳು ನಿಮಗೆ ಬರುವುದೇ ಇಲ್ಲ. ನಮ್ಮಅಡುಗೆ ಮನೆಗಳಲ್ಲೇ ನಾವು ಬೇಕಾದಷ್ಟು ಔಷಧಗಳನ್ನು ತಯಾರು ಮಾಡಿಕೊಳ್ಳಬಹುದು. ಕಾಫಿ ಟೀ ಕುಡಿಯುವುದನ್ನು ಕಡಿಮೆ ಮಾಡಿ ಕಷಾಯ ಕುಡಿಯುವ ಅಭ್ಯಾಸ ಪ್ರಾರಂಭಿಸುವುದು ಒಳ್ಳೆಯದು. ಹಿತವಾಗಿರುವುದೆಲ್ಲ ಮಿತವಾಗಿರಲಿ.

ನಿಮ್ಮ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಗಮನಿಸಿಕೊಳ್ಳಿ. ಕಾಲಕಾಲಕ್ಕೆ ಆಹಾರವನ್ನು ಸೇವಿಸುತ್ತಿದ್ದೀರಾ? ಮಲಮೂತ್ರ ವಿಸರ್ಜನೆ ಪ್ರತಿನಿತ್ಯ ಸರಿಯಾಗಿ ಆಗುತ್ತಿದೆಯಾ? ನಿದ್ದೆ ಬರುತ್ತಿದೆಯಾ? ಕೆಲಸ ಮಾಡುವುದಕ್ಕೆ ನಿಮ್ಮಲ್ಲಿ ಉತ್ಸಾಹವಿದೆಯಾ? ಇಷ್ಟನ್ನು ಮಾತ್ರ ನೀವು ಪರಿಶೀಲಿಸಿಕೊಳ್ಳಿ. ಇವೆಲ್ಲ ಸರಿಯಾಗಿದ್ದರೆ ಯಾವ ಆಸ್ಪತ್ರೆಗೂ ಹೋಗಿ ಏನೂ ಪರೀಕ್ಷೆ ಮಾಡಿಸಿಕೊಳ್ಳುವ ಅವಶ್ಯಕತೆಯಿಲ್ಲ.

ಯಾವುದು ಸರಿ, ಯಾವುದು ತಪ್ಪುಎಂಬ ವಿಶ್ಲೇಷಣೆ ಇದಲ್ಲ. ನಾವು ಪ್ರಕೃತಿಗೆ ಎಷ್ಟು ಹತ್ತಿರವಾಗಿ ನಮ್ಮ ಜೀವನವನ್ನು ನಡೆಸುತ್ತೇವೋ ಅಷ್ಟು ಆರೋಗ್ಯಆರೋಗ್ಯಕರ ಬದುಕು ನಮ್ಮದಾಗುತ್ತದೆ. ಹಣ ಸಂಪಾದನೆಯೊಂದೇ ಜೀವನದ ಗುರಿಯಲ್ಲ. ಯಂತ್ರಗಳ ಮೇಲೆ ಅವಲಂಬಿತರಾಗಿ ಯಾಂತ್ರಿಕ ಜೀವನ ನಡೆಸಬೇಡಿ. ಕೊನೆಯಿರದ ದುಡಿತವನ್ನು ನಿಲ್ಲಿಸಿ ನಿಮಗಾಗಿ ಸ್ವಲ್ಪ ಸಮಯ ಮೀಸಲಿರಿಸಿಕೊಂಡು ನೀವೇ ಕುಳಿತು ವಿರಾಮವಾಗಿ ಚಿಂತನೆ ಮಾಡಿ; ನೆಮ್ಮದಿಯಿಂದಿರಿ.

# "ಭಾರತೀಯ ಪರಂಪರೆಯೇ ಯುವಜನರಿಗೆ ಆದರ್ಶ"

ಡಾ.ಹೆಚ್.ಎಸ್. ಗೋಪಾಲರಾವ್

ಅನಂತಕುಮಾರ್ ಪ್ರತಿಷ್ಠಾನವು ಅದಮ್ಯ ಚೇತನದ ಸಹಭಾಗಿತ್ವದಲ್ಲಿ ನಡೆಸಲಿರುವ ದೇವಾಲಯ ಶಿಲ್ಪಕಲೆಯ ಮೂಲಕ ಪರಂಪರೆಯ ವೈಭವವನ್ನು ಪರಿಚಯಿಸಲಿರುವ ಕಾರ್ಯಕ್ರಮ ಸರಣಿಯ ಉದ್ಘಾಟನೆಯು 16 ನವೆಂಬರ್ 2021ರಂದು ಅದಮ್ಯಚೇತನದ ಸಭಾಂಗಣದಲ್ಲಿ ನೆರವೇರಿತು. ಖ್ಯಾತ ಸಂಶೋಧಕ ಡಾ. ಹೆಚ್. ಎಸ್. ಗೋಪಾಲರಾವ್ ಕಾರ್ಯಕ್ರಮವನ್ನು ಉದ್ಘಾಟಿಸಿ, ಯುವಪೀಳಿಗೆಯು ನಮ್ಮ ಪರಂಪರೆಯ ಪ್ರತೀಕಗಳಾದ ದೇವಾಲಯಗಳನ್ನೂ ಅಲ್ಲಿನ ಶಿಲ್ಪವೈಭವವನ್ನೂ ಪರಿಚಯಿಸಿಕೊಳ್ಳಬೇಕಾದ ಅಗತ್ಯವನ್ನು ವಿವರಿಸಿದರು. ಅದಮ್ಯ ಚೇತನದ ಅಧ್ಯಕ್ಷರಾದ ಡಾ. ತೇಜಸ್ವಿನಿ ಅನಂತಕುಮಾರ್ ಮಾತನಾಡಿ, ನಮ್ಮ ಪರಂಪರೆಯನ್ನು ಕೇವಲ ಗತವೈಭವವಾಗಿ ಕಾಣದೆ ಯುವಪೀಳಿಗೆಯ ಬದುಕಿನ ರೀತಿ ನೀತಿಗಳಿಗೆ ಆದರ್ಶವಾಗಿ ಉಳಿಸಿಕೊಳ್ಳಬೇಕಾಗಿದೆ ಎಂದು ಹೇಳಿದರು.

ಹಿರಿಯ ವಕೀಲ ಶ್ರೀ ಬಿ.ಸಿ. ಸೀತಾರಾಮರಾವ್, ಪ್ರಾಚೀನ ದೇಗುಲಗಳ ಹವ್ಯಾಸಿ ವೀಕ್ಷಣಾ ಬಳಗದ ಅಧ್ಯಕ್ಷ ಶ್ರೀ ಗಣಪತಿ ಭಟ್, ಸಹಬಾಳ್ವೆಯ ನಿರ್ದೇಶಕ ಡಾ. ರಾಘವೇಂದ್ರ ಪ್ರಸಾದ್, ಓಂ ಸೇವಾಕೇಂದ್ರದ ಮುಖ್ಯಸ್ಥ ಡಾ. ಕೃಷ್ಣ ಗುರೂಜಿ, ಕಾರ್ಯಕ್ರಮ ಸಂಯೋಜಕರಾದ ಶ್ರೀ ಟಿ.ಎಸ್. ಗೋಪಾಲ್ ಮತ್ತು ಚಕ್ರಪಾಣಿ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಜನಾರ್ದನ ತುಂಗ ಕಾರ್ಯಕ್ರಮವನ್ನು ನಿರೂಪಿಸಿದರು.




# ಅನಂತಕುಮಾರ್ ಕನಸಿನ ಪರಿಕಲ್ಪನೆಗೆ ಸಂದ ಗೌರವ

ಪುಟ 1 ರಿಂದ ಮಕ್ಕಳಿಗಾಗಿ ಗೋಡೆಪತ್ರಿಕೆ, ಪರಿಸರ ಪಾಠಗಳು, ಆಟಪಾಟ, ಸೇವಾ ಉತ್ಸವ, ಪ್ಲೇಟ್ ಬ್ಯಾಂಕ್, ಹಸಿರು ಬೆಂಗಳೂರು, ಹಸಿರು ಜೀವನಶೈಲಿಯ ಪ್ರದರ್ಶನ, ಅನಂತವನ , ಆರೋಗ್ಯ ಚೇತನ, ಸುಭಿಕ್ಷ ಗ್ರಾಮ- ಮೊದಲಾದವು ಅದಮ್ಯಚೇತನದ ಇತರ ಪ್ರಮುಖ ಕಾರ್ಯಕ್ರಮಗಳು.

ಕೋವಿಡ್ ಪರಿಣಾಮವಾಗಿ ಜನಜೀವನವು ತತ್ತರಿಸುತ್ತಿದ್ದ ಸಂದರ್ಭದಲ್ಲಿ ಮೊದಲ ಅಲೆಯ ಕಾಲದಲ್ಲಿ ಏಳು ಲಕ್ಷಕ್ಕೂ ಹೆಚ್ಚು ಆಹಾರಪೊಟ್ಟಣಗಳನ್ನೂ ದಿನಸಿ ಸಾಮಗ್ರಿಗಳನ್ನೊಳಗೊಂಡ 28000 ಕಿಟ್ ಗಳನ್ನೂ ವಿತರಿಸಿದ ಹಿರಿಮೆ ಅದಮ್ಯಚೇತನ ಸಂಸ್ಥೆಯದು. ಅಂತೆಯೇ, ಎರಡನೆಯ ಅಲೆಯ ಸಂದರ್ಭದಲ್ಲಿ ಕೋವಿಡ್ ಕಾರ್ಯಕರ್ತರು, ಪೋಲೀಸ್ ಸಿಬ್ಬಂದಿಗಳಿಗೂ , ಆಸ್ಪತ್ರೆ, ಸ್ಮಶಾನ ಮತ್ತಿತರ ಕಡೆಗಳಲ್ಲೂ 40 ದಿನಗಳ ಅವಧಿಯಲ್ಲಿ ಎರಡೂವರೆ ಲಕ್ಷಕ್ಕೂ ಹೆಚ್ಚು ಊಟವನ್ನು ವಿತರಿಸಲಾಗಿದೆ.

ನಿತ್ಯ ಅನ್ನದಾನವೆಂಬ ಯೋಜನೆಯನ್ನು ಪ್ರಾರಂಭಿಸಿದ್ದು, ಪ್ರತಿನಿತ್ಯ ಆರು ವಿವಿಧ ಕೇಂದ್ರಗಳ ಮೂಲಕ ತಲಾ 150 ರಷ್ಟು ಜನರಿಗೆ ಉಚಿತವಾಗಿ ಮಧ್ಯಾಹ್ನದ ಊಟವನ್ನು ವಿತರಿಸಲಾಗುತ್ತಿದೆ.


ಅದಮ್ಯ ಚೇತನ ಸಂಸ್ಥೆಯ ಈ ನಿರಂತರ ಸೇವಾಕಾರ್ಯವನ್ನು ಗುರುತಿಸಿ ಕರ್ನಾಟಕ ಸರ್ಕಾರವು ಕಳೆದ ನವೆಂಬರ್ 1 ರಂದು ಅದಮ್ಯ ಚೇತನಕ್ಕೆ ಸ್ವಾತಂತ್ರ್ಯ ಅಮೃತಮಹೋತ್ಸವದ ವಿಶೇಷ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಸಂಸ್ಥೆಯ ಪರವಾಗಿ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಸಮಾರಂಭವೊಂದರಲ್ಲಿ ಕರ್ನಾಟಕದ ಮುಖ್ಯಮಂತ್ರಿಯವರಾದ ಶ್ರೀ ಬಸವರಾಜ ಬೊಮ್ಮಾಯಿಯವರಿಂದ ಪ್ರಶಸ್ತಿಯನ್ನು ಸ್ವೀಕರಿಸಿದರು. ಇದು ಅನಂತಕುಮಾರ್ ಕನಸಿನ ಯೋಜನೆಗೆ ಸಂದ ಅರ್ಹ ಗೌರವವೇ ನಿಜ. "ಅದಮ್ಯ ಚೇತನ ಒಂದು ಆಂದೋಲನ ಎಂದು ಅನಂತಕುಮಾರ್ ಯಾವಾಗಲೂ ಹೇಳುತ್ತಿದ್ದರು. ಎಲ್ಲರ ಸಹಕಾರದಿಂದ ಸಂಸ್ಥೆ ಸಾಗಿದೆ. ಹಲವು ಜನ ಸಂಸ್ಥೆಯ ಏಳ್ಗೆಗೆ ಶ್ರಮಿಸಿದ್ದಾರೆ. ಅವರೆಲ್ಲರಿಗೂ ಸಂದ ಪ್ರಶಸ್ತಿ ಇದಾಗಿದೆ" ಎಂದು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅಭಿಪ್ರಾಯಪಡುತ್ತಾರೆ.

ವ್ಯಕ್ತಿ ವಿಶೇಷ ಮಾಲಿಕೆ

# ಡಾ. ಶ್ಯಾಮಾಪ್ರಸಾದ್ ಮುಖರ್ಜಿ

"ನೀವು ಯಾವುದೇ ಕೆಲಸವನ್ನು ಕೈಗೆತ್ತಿಕೊಂಡರೂ ಅದನ್ನು ಗಂಭೀರವಾಗಿ ಪರಿಗಣಿಸಿ ಮನಸ್ಸಿಟ್ಟು ಮಾಡಿ; ಯಾವುದೇ ಕೆಲಸವನ್ನು ಅರೆಬರೆ ಮಾಡಬೇಡಿ. ಪರಿಪೂರ್ಣ ಸಾಧನೆ ನಿಮ್ಮದಾಗುವವರೆಗೆ ತೃಪ್ತಿ ಹೊಂದಬೇಡಿ. ಶಿಸ್ತು ಮತ್ತು ತಾಳ್ಮೆಗಳನ್ನು ರೂಢಿಸಿಕೊಳ್ಳಿ. ನಿಮಗೆ ಪ್ರಿಯವಾದ ನಂಬಿಕೆಗಳನ್ನು ಬಿಡಬೇಡಿ, ಆದರೆ ನಿಮ್ಮ ವಿರೋಧಿಗಳ ಅಭಿಪ್ರಾಯಗಳಿಗೆ ಬೆಲೆ ಕೊಡುವುದನ್ನೂ ಕಲಿಯಿರಿ." ಎಂದು ಮಾನವಸಮಾಜಕ್ಕೆ ಕಿವಿಮಾತು ಹೇಳಿದ ಮಹನೀಯರೇ ಡಾ. ಶ್ಯಾಮಾ ಪ್ರಸಾದ್ ಮುಖರ್ಜಿ.



ಭಾರತೀಯ ಜನಸಂಘದ ಸಂಸ್ಥಾಪಕ ಡಾ. ಶ್ಯಾಮಾಪ್ರಸಾದ್ ಮುಖರ್ಜಿ - ನೂರಾರು ಪ್ರಖರ ಚಿಂತಕರನ್ನು ಭಾರತಕ್ಕೆ ನೀಡಿದ ಪಶ್ಚಿಮ ಬಂಗಾಳದ ಸುಪುತ್ರರಿವರು. ಹುಟ್ಟಿದ್ದು ಜುಲೈ ೬, ೧೯೦೧ ರಂದು ಕಲ್ಕತ್ತದಲ್ಲಿ. ತಂದೆ ಆಶುತೋಷ್ ಮುಖರ್ಜಿ, ಕಲ್ಕತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು. ತಾಯಿ ಜೋಗಮಾಯಾ ದೇವಿ. ಆರಂಭಿಕ ವಿದ್ಯಾಭ್ಯಾಸ ಮಿತ್ರ ವಿದ್ಯಾ ಸಂಸ್ಥೆ ಮತ್ತು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ನಡೆಯಿತು. ಇಂಗ್ಲಿಷ್ ಬಿ.ಎ. ಮತ್ತು ಬಂಗಾಳಿಯಲ್ಲಿ ಎಂಎ ಮಾಡಿದ ಮುಖರ್ಜಿಯವರು ೧೯೨೩ ರಲ್ಲಿ ಸೆನೇಟಿನ ಫೆಲೋ ಆಗುವುದರ ಜೊತೆಗೆ ಬಿಎಲ್ ಪದವಿಯನ್ನೂ ಪಡೆದರು. ಈ ಮಧ್ಯೆ ೧೯೨೨ ರಲ್ಲಿ ಸುಧಾದೇವಿಯವರನ್ನು ವಿವಾಹವಾದರು.

**ವೃತ್ತಿ ಜೀವನ**

1 9 2 4 ರಲ್ಲಿ ಕಲ್ಕತ್ತಾ ಉಚ್ಚನ್ಯಾಯಾಲಯದಲ್ಲಿ ನ್ಯಾಯವಾದಿಯಾಗಿ ವೃತ್ತಿ ಪ್ರಾರಂಭಿಸಿದರು. ೧೯೨೬ ರಲ್ಲಿ ಹೆಚ್ಚಿನ ಕಲಿಕೆಗಾಗಿ ಲಂಡನ್ನಿನ ಲಿಂಕನ್ಸ್ ಇನ್ ಸೇರಿದರು. ಅದೇ ವರ್ಷ ತಮ್ಮನ್ನು ಸೇರಿಕೊಳ್ಳುವಂತೆ ಇಂಗ್ಲಿಷ್ ಬಾರ್ ಅವರಿಗೆ ಆಹ್ವಾನ ನೀಡಿತು. ತಮ್ಮ ೩೩ ನೆಯ ವಯಸ್ಸಿನಲ್ಲಿ ಕಲ್ಕತ್ತ ವಿಶ್ವ ವಿದ್ಯಾನಿಲಯದ ಅತಿ ಕಿರಿಯ ಉಪಕುಲಪತಿ ಎಂಬ ಹೆಗ್ಗಳಿಕೆಯೊಂದಿಗೆ ಅಧಿಕಾರ ವಹಿಸಿಕೊಂಡರು. ೧೯೩೪ ರಿಂದ ೧೯೩೮ ರ ವರೆಗಿನ ಕಾರ್ಯ ಕಾಲದಲ್ಲಿ ರವೀಂದ್ರನಾಥ ಟ್ಯಾಗೋರರನ್ನು ಬಂಗಾಳಿಯಲ್ಲಿ ಭಾಷಣ ಮಾಡುವಂತೆ ಆಹ್ವಾನಿಸಿದರು. ಅದು ಟ್ಯಾಗೋರರ ಮೊತ್ತಮೊದಲ ಬಂಗಾಳಿ ಭಾಷಣವಾಗಿತ್ತು! ಅದೇ ವರ್ಷ ಉನ್ನತ ವಿದ್ಯಾಭ್ಯಾಸದಲ್ಲಿ ಭಾರತೀಯ ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಬಳಸಲಾಗಿತ್ತು. ೧೯೩೮ ರಲ್ಲಿ ವಿಶ್ವವಿದ್ಯಾನಿಲಯವು ಮುಖರ್ಜಿಯವರಿಗೆ ಡಿ ಲಿಟ್ ಪದವಿ ನೀಡಿ ಗೌರವಿಸಿತು.

**ರಾಜಕೀಯ ಪ್ರವೇಶ**

ಮುಖರ್ಜಿಯವರು ೧೯೨೯ ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಲ್ಕತ್ತ ಯುನಿವರ್ಸಿಟಿ ಕ್ಷೇತ್ರದಿಂದ ಬಂಗಾಳದ ವಿಧಾನ ಮಂಡಳಿಗೆ ಆಯ್ಕೆಯಾದರು. ವಿಧಾನ ಮಂಡಳಿಯನ್ನು ಬಹಿಷ್ಕರಿಸುವ ಕಾಂಗ್ರೆಸಿನ ನಿರ್ಧಾರವನ್ನು ಪ್ರತಿಭಟಿಸಿ, ಪಕ್ಷಕ್ಕೂ ವಿಧಾನ ಮಂಡಳಿ ಸದಸ್ಯತ್ವಕ್ಕೂ ರಾಜೀನಾಮೆ ನೀಡಿ ಸ್ವತಂತ್ರ ಅಭ್ಯರ್ಥಿಯಾಗಿ ಅದೇ ಕ್ಷೇತ್ರದಿಂದ ಜಯಗಳಿಸಿದರು. ೧೯೩೭ ರಲ್ಲಿ ಕೃಷಕ ಪ್ರಜಾ ಪಾರ್ಟಿ ಬಹುಮತದಿಂದ ಆಡಳಿತದ ಚುಕ್ಕಾಣಿ ಹಿಡಿದಾಗಲೂ ಮುಖರ್ಜಿಯವರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯ ಗಳಿಸಿದರು. ೧೯೪೧-೪೨ ರಲ್ಲಿ ಸರಕಾರದಲ್ಲಿ ಬಂಗಾಳ ಪ್ರಾಂತ್ಯದ ಹಣಕಾಸು ಸಚಿವರಾಗಿ ಕಾರ್ಯ ನಿರ್ವಹಿಸಿದರು. ಕ್ವಿಟ್ಇಂಡಿಯಾ ಚಳವಳಿಯನ್ನು ಹತ್ತಿಕ್ಕಲು ಬ್ರಿಟಿಷ್ ಸರಕಾರವು ತೆಗೆದುಕೊಂಡ ದಮನಕಾರಿ ಕ್ರಮಗಳನ್ನು ಪ್ರತಿಭಟಿಸಿ ಮಂತ್ರಿ ಪದವಿಗೆ ರಾಜೀನಾಮೆ ನೀಡಿದರು. ೧೯೪೬ ರಲ್ಲಿ ಮತ್ತೆ ಚುನಾವಣೆಯನ್ನು ಗೆಲ್ಲುವುದಲ್ಲದೆ ಭಾರತದ ಸಂವಿಧಾನ ಸಭೆಯ ಸದಸ್ಯರಾಗಿಯೂ ಚುನಾಯಿತರಾದರು.

೧೯೩೯ ರಲ್ಲಿ ಹಿಂದೂ ಮಹಾಸಭಾದ ಸದಸ್ಯತ್ವವನ್ನು ಪಡೆದು ೧೯೪೦ ರಲ್ಲಿ ಅದರ ಕಾರ್ಯಕಾರಿ ಅಧ್ಯಕ್ಷರಾದರು. ಫೆಬ್ರವರಿ ೧೯೪೨ ರಲ್ಲಿಯೇ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತ "ಮುಸ್ಲಿಮರು ಪ್ರತ್ಯೇಕ ಪಾಕಿಸ್ತಾನವನ್ನು ಕೇಳುವುದಾದರೆ ತಮ್ಮ ಗಂಟು ಮೂಟೆಗಳ ಸಮೇತ ಭಾರತವನ್ನು ಬಿಟ್ಟು ತಾವು ಬಯಸಿದ ಕಡೆಗೆ ತೊಲಗಬೇಕು" ಎಂದು ಹೇಳಿಕೆ ನೀಡಿದರು. ಇದಕ್ಕೆ ಆಗ ಟೀಕೆ ವ್ಯಕ್ತವಾದರೂ ಮುಂದೆ ನೌಖಾಲಿಯ ಗಲಭೆಯಲ್ಲಿ ಸಮರ್ಥನೆ ದೊರೆಯಿತು.

**ಮುಖರ್ಜಿ – ಗಾಂಧಿ: ವಿಭಿನ್ನ ನಿಲುವು**

1946 ರಲ್ಲಿ ಕಲ್ಕತ್ತದಲ್ಲಿ ಪ್ರಾರಂಭವಾದ ಹಿಂದೂ ಮತ್ತು ಮುಸ್ಲಿಮರ ನಡುವಣ ಗಲಭೆಯು ಕೆಲವೇ ದಿನಗಳಲ್ಲಿ ಮುಸ್ಲಿಂ ಬಾಹುಳ್ಯದ ನೌಖಾಲಿಗೆ ವ್ಯಾಪಿಸಿ ಸಾವಿರಾರು ಜನ ಹಿಂದುಗಳ ದಾರುಣವಾದ ಹತ್ಯೆ ನಡೆಯಿತು. ಈ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಯವರು , ಹಿಂದೂಗಳು ನೌಖಾಲಿಯಲ್ಲಿ ಮುಸ್ಲಿಮರ ನೆರೆಯಲ್ಲಿಯೇ ತಮ್ಮ ಬದುಕನ್ನು ಮತ್ತೆ ಕಟ್ಟಿಕೊಳ್ಳುವಂತೆ ಮನ ಒಲಿಸಲು ತೊಡಗಿದರು. ಆದರೆ, ಹಿಂದೂಗಳಿಗಾಗಿಯೇ ಪ್ರತ್ಯೇಕವಾದ ಪಶ್ಚಿಮ ಬಂಗಾಳದ ಕಲ್ಪನೆಯನ್ನು ಮುಖರ್ಜಿಯವರು ಪ್ರಚಾರ ಮಾಡತೊಡಗಿದರು. ಹಿಂದೂಗಳ ಭವಿಷ್ಯದ ದೃಷ್ಟಿಯಿಂದ ಅಖಂಡ ಭಾರತದಲ್ಲಿಯೇ ಮುಸ್ಲಿಂ ಬಾಹುಳ್ಯದ ಪೂರ್ವ ಬಂಗಾಳ ಮತ್ತು ಹಿಂದೂಗಳಿಗೆ ರಕ್ಷಣೆ ಒದಗಿಸಬಲ್ಲ ಪಶ್ಚಿಮ ಬಂಗಾಳಗಳು ಪ್ರತ್ಯೇಕವಾಗಿರಬೇಕೆಂಬ ಅಭಿಪ್ರಾಯವನ್ನು ಮುಖರ್ಜಿ ಹೊಂದಿದ್ದರು. ಇದೇ ಸಂದರ್ಭದಲ್ಲಿ ಮುಸ್ಲಿಂಲೀಗ್ ಎರಡೂ ಬಂಗಾಳಗಳನ್ನು ಮುಸ್ಲಿಮರ ಮಾತೃಭೂಮಿ ಎಂದು ಪರಿಗಣಿಸಬೇಕು ಎಂದು ಬ್ರಿಟಿಷರ ಮೇಲೆ ಒತ್ತಡ ತರುತ್ತಿತ್ತು.

ಅಗಸ್ಟ್ ೧೫, ೧೯೪೭ ರಂದು ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ ನೆಹರೂರವರ ರಾಷ್ಟ್ರೀಯ ಮಧ್ಯಂತರ ಸರಕಾರದಲ್ಲಿ ಕೈಗಾರಿಕೆ ಮತ್ತು ಸರಬರಾಜು ಖಾತೆಗಳ ಸಚಿವರಾಗಿ ಮುಖರ್ಜಿಯವರು ನಿಯೋಜಿತರಾದರು.

ಸ್ವಾತಂತ್ರ್ಯಪೂರ್ವದಲ್ಲಿಯೇ ಮುಖರ್ಜಿಯವರು ಊಹಿಸಿದ್ದಂತೆ ದೇಶ ವಿಭಜನೆಯ ನಂತರ ಪೂರ್ವ ಪಾಕಿಸ್ತಾನದಲ್ಲಿ ಶೇ ೩೦ ರಷ್ಟಿದ್ದ ಹಿಂದೂಗಳ ಮೇಲೆ ಅಪಾರವಾದ ದೌರ್ಜನ್ಯ ನಡೆಯಿತು. ಇದರಿಂದಾಗಿ ಅಪಾರ ಸಂಖ್ಯೆಯ ಹಿಂದೂಗಳು ಭಾರತಕ್ಕೆ ವಲಸೆ ಬಂದರು. ೧೯೪೯-೫೦ ರಲ್ಲಿ ಗಲಭೆಗಳು ಮರುಕಳಿಸಿದಾಗ ನೆಹರೂ ಮತ್ತು ಲಿಯಾಖತ್ ಅಲಿಖಾನ್ ನಡುವೆ ೦೮/೦೪/೧೯೫೦ ರಂದು ಏರ್ಪಟ್ಟ ದೆಹಲಿ ಒಪ್ಪಂದದಲ್ಲಿ , ಅದಾಗಲೇ ವಲಸೆ ಬಂದಿರುವ ಬಂಗಾಳಿ ಹಿಂದೂಗಳನ್ನು ಹಿಂದೆ ಕರೆಸಿಕೊಳ್ಳುವ ಮತ್ತು ಮುಂದಿನ ವಲಸೆಗಳನ್ನು ತಡೆಯುವ ಕ್ರಮಗಳ ಬಗ್ಗೆ ಸ್ಪಷ್ಟತೆಯಿರಲಿಲ್ಲ. ಈ ಒಪ್ಪಂದವನ್ನು ಮುಖರ್ಜಿಯವರು ತೀವ್ರವಾಗಿ ವಿರೋಧಿಸಿದರು. ಪೂರ್ವ ಪಾಕಿಸ್ತಾನದಲ್ಲಿ ಹಿಂದೂಗಳಿಗಾಗಿ ಮೂರನೇ ಒಂದು ಭಾಗ ಪ್ರದೇಶವನ್ನು ಮೀಸಲಾಗಿರಿಸಬೇಕೆಂಬ ಅವರ ಒತ್ತಾಯಕ್ಕೆ ನೆಹರೂ ಒಪ್ಪದಿದ್ದಾಗ , ಒಪ್ಪಂದಕ್ಕೆ ಸಹಿ ಬೀಳುವ ಎರಡು ದಿನ ಮೊದಲೇ ಮಂತ್ರಿಪದವಿಗೆ ರಾಜೀನಾಮೆ ನೀಡಿದರು.

**ಜನಸಂಘದ ಸ್ಥಾಪನೆ ಮತ್ತು ಕಾಶ್ಮೀರದ ಹೋರಾಟ**

ತಾವು ನಂಬಿದ ತತ್ತ್ವಗಳಿಗಾಗಿ ಹೋರಾಡಲು ಕಾಂಗ್ರೆಸ್ ಮತ್ತು ಎಡಪಂಥೀಯ ಸಂಘಟನೆಗಳಿಂದ ಹೊರತಾದ ಹೊಸದೊಂದು ರಾಜಕೀಯ ವೇದಿಕೆಯ ಅಗತ್ಯ ಕಂಡು ಬಂದಾಗ ಅವರು ಆರೆಸ್ಸೆಸ್ ಸಂಸ್ಥಾಪಕ ಗುರು ಗೋಳ್ವಲ್ಕರ್ ಸಲಹೆಯ ಮೇರೆಗೆ ೨೧/೧೦/೧೯೫೧ ರಂದು ಭಾರತೀಯ ಜನಸಂಘದ ಸ್ಥಾಪನೆ ಮಾಡಿದರು. ೧೯೫೧-೫೨ ರಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಡಾ. ಮುಖರ್ಜಿ ಗೆಲುವು ಸಾಧಿಸಿದರು.

೧೯೪೮ ರಲ್ಲಿ ನಡೆದ ಭಾರತ ಪಾಕಿಸ್ತಾನ ಯುದ್ಧದ ನಂತರ ಕಾಶ್ಮೀರದ ಒಂದು ಭಾಗ ಪಾಕಿಸ್ತಾನದ ವಶದಲ್ಲಿಯೇ ಉಳಿಯಿತು. ಕಾಶ್ಮೀರವು ಭಾರತದಲ್ಲಿ ಸಂಪೂರ್ಣವಾಗಿ ವಿಲಯನಗೊಳ್ಳಬೇಕೆಂದು ಪ್ರಾರಂಭಿಸಿದ್ದ ಜಮ್ಮು ಕಾಶ್ಮೀರ ಚಳವಳಿಯಲ್ಲಿ ಭಾಗವಹಿಸಿದರು. ಕಾಶ್ಮೀರವನ್ನು ಪ್ರವೇಶಿಸಲು ಕಾಶ್ಮೀರದ ಪ್ರಧಾನ ಮಂತ್ರಿಯ ಅನುಮತಿ ಪಡೆಯಬೇಕೆಂಬ ನಿಯಮವನ್ನು ಬಲವಾಗಿ ವಿರೋಧಿಸಿ ಅನುಮತಿಯಿಲ್ಲದೆ ಪ್ರವೇಶಿಸಿದ ಮುಖರ್ಜಿಯವರನ್ನು ೧೧/೦೫/೧೯೫೩ ರಂದು ನೆಹರೂ ಸರಕಾರ ಬಂಧಿಸಿ ಶ್ರೀನಗರ ಕೇಂದ್ರ ಕಾರಾಗ್ರಹದಲ್ಲಿರಿಸಿತು. ನಂತರ ಅವರನ್ನು ನಗರದ ಹೊರವಲಯದ ಕಾಟೇಜ್ ಒಂದಕ್ಕೆ ಸ್ಥಳಾಂತರಿಸಿತು.

**ನಿಗೂಢ ಸಾವು**

ಬಂಧನದಲ್ಲಿರುವಾಗ ಜೂನ್೧೯ ಮತ್ತು ೨೦ ರ ನಡುವಣ ರಾತ್ರಿಯಲ್ಲಿ ಅವರಿಗೆ ಬೆನ್ನು ನೋವು ಮತ್ತು ವಿಪರೀತ ಜ್ವರ ಕಾಣಿಸಿಕೊಂಡಿತು. ಅವರನ್ನು ಪರೀಕ್ಷಿಸಿದ ವೈದ್ಯರು ನೀಡಲು ಮುಂದಾದ ಔಷಧವು ತಮಗೆ ಒಗ್ಗುವುದಿಲ್ಲ ಎಂದು ಮುಖರ್ಜಿಯವರು ತಿಳಿಸಿದರು. ಇಷ್ಟಿದ್ದರೂ ವೈದ್ಯರು ತಾವು ನೀಡುತ್ತಿರುವುದು ಸುಧಾರಿತ ಔಷಧಿ ಎಂದು ಅವರನ್ನು ನಂಬಿಸಿ ಅದನ್ನೇ ನೀಡಿದರು. ಜೂನ್ ೨೨ ರಂದು ಅವರಿಗೆ ಎದೆಯಲ್ಲಿ ನೋವು ಕಾಣಿಸಿಕೊಂಡಿತು. ಅವರನ್ನು ಆಸ್ಪತ್ರೆಗೆ ಭರ್ತಿ ಮಾಡಲಾಯಿತು. ಜೂನ್೨೩ ರಂದು ಬೆಳಿಗ್ಗೆ ೩.೪೦ ಕ್ಕೆ ಡಾ. ಶ್ಯಾಮಾಪ್ರಸಾದ್ ಮುಖರ್ಜಿಯವರು ತೀವ್ರ ಹೃದಯಾಘಾತದಿಂದ ನಿಧನರಾದರೆಂದು ರಾಜ್ಯ ಸರಕಾರವು ಘೋಷಿಸಿತು. ಮುಖರ್ಜಿಯವರದ್ದು ಸಹಜ ಸಾವಲ್ಲ, ರಾಜಕೀಯ ಕೊಲೆ ಎಂಬ ವಿವಾದಗಳನ್ನು ನೆಹರೂ ಸರಕಾರ ತಳ್ಳಿ ಹಾಕಿತು.

ಡಾ. ಶ್ಯಾಮಾ ಪ್ರಸಾದ್ ಮುಖರ್ಜಿಯವರ ಬದುಕಿನ ಒಂದೊಂದು ಘಟನೆಯೂ ಒಂದೊಂದು ಕಥೆಯನ್ನು ಸಾರುತ್ತದೆ. ಅವರ ಬದುಕೇ ಒಂದು ಸಂದೇಶ; ತಮ್ಮ ಸಂದೇಶವನ್ನೇ ಅವರು ಬದುಕಿದರು. ಅವರ ಮರಣದ ನಂತರದ ಬೆಳವಣಿಗೆಗಳನ್ನು ಗಮನಿಸಿದರೆ ಅವರ ದೂರದರ್ಶಿತ್ವದ ಅರಿವಾಗುತ್ತದೆ.

**- ಕೆ. ಜನಾರ್ದನ ತುಂಗ**

# ಅದಮ್ಯ ಚೇತನದ ತಿಂಗಳ ವರದಿ

## (೨೨ ಅಕ್ಟೋಬರ್ ರಿಂದ ೨೨ ನವೆಂಬರ್ ೨೦೨೧ ರವರೆಗೆ)



### ಬಿಸಿಯೂಟ ಯೋಜನೆಯ ಪುನರಾರಂಭ

ಈ ತಿಂಗಳ ಅತಿ ಮುಖ್ಯವಾದ ಸುದ್ದಿಯೆಂದರೆ, ಶಾಲೆಗಳು ಪುನರಾರಂಭಗೊಂದು ಮಕ್ಕಳ ಬಿಸಿಯೂಟದ ವ್ಯವಸ್ಥೆಗೆ ಮರಳಿ ಚಾಲನೆ ದೊರಕಿದೆ. ಜೂನ್ ೨೦೦೩ರಲ್ಲಿ ಆರಂಭಗೊಂಡು ನಿರಂತರವಾಗಿ ನಡೆಯುತ್ತಿದ್ದ ಅದಮ್ಯಚೇತನದ ಬಿಸಿಯೂಟದ ಕಾರ್ಯಕ್ರಮಕ್ಕೆ ೨೦೨೦ರ ಕೋವಿಡ್ ಅಲೆ ತಡೆಯೊಡ್ಡಿತ್ತು. ಮುಂದಿನ ಇಪ್ಪತ್ತು ತಿಂಗಳು ಸ್ಥಗಿತಗೊಂಡಿದ್ದ ಕಾರ್ಯಕ್ರಮ ಈಗ ಪ್ರಾರಂಭಗೊಂಡಿದೆ. ನವೆಂಬರ್ ಎರಡನೇ ತಾರೀಕಿನಂದು ಸಿಹಿಯೂಟ ಸವಿಯುವುದರೊಂದಿಗೆ ರಾಜ್ಯದ ವಿವಿಧೆಡೆಗಳಲ್ಲಿನ ಒಂದು ಲಕ್ಷ ಇಪ್ಪತ್ತು ಸಾವಿರ ಮಕ್ಕಳು ಅದಮ್ಯ ಚೇತನದ ಬಿಸಿಯೂಟ ಸೌಲಭ್ಯ ಪಡೆಯತೊಡಗಿದ್ದಾರೆ. ಇವರಲ್ಲಿ ಬೆಂಗಳೂರು ಭಾಗದ ೪೫,000, ಹುಬ್ಬಳ್ಳಿಧಾರವಾಡ ಪ್ರಾಂತ್ಯದ ೬೫,000 ಮತ್ತು ಕಲಬುರ್ಗಿ ವಿಭಾಗದ ೯,000 ಮಕ್ಕಳು ಸೇರಿದ್ದಾರೆ. ಅದಮ್ಯ ಚೇತನದ ಅಡುಗೆಮನೆಗಳಲ್ಲಿ ತಯಾರಾಗುವ ಅನ್ನ ಸಾಂಬಾರ್, ಇಲ್ಲವೇ ಬಿಸಿಬೇಳೆಭಾತ್/ಪಲಾವ್/ಉಪ್ಪಿಟ್ಟಿನೊಡನೆ ಮಕ್ಕಳಿಗೆ ಕುಡಿಯುವ ಹಾಲನ್ನು ನೀಡುವುದೂ ಈ ವ್ಯವಸ್ಥೆಯಲ್ಲಿ ಸೇರಿದೆ.



### ಹಸಿರು ಭಾನುವಾರ

ಅಕ್ಟೋಬರ್ ೩೧ ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ನಡೆದ 305ನೇ ಹಸಿರು ಭಾನುವಾರ ಕಾರ್ಯಕ್ರಮವನ್ನು ಇತ್ತೀಚೆಗೆ ನಿಧನರಾದ ಖ್ಯಾತ ನಟ ಶ್ರೀ ಪುನೀತ್ ರಾಜಕುಮಾರ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವ ಮೂಲಕ ಆಚರಿಸಲಾಯಿತು. ಅದಮ್ಯ ಚೇತನದ ಪರವಾಗಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ವೇಣುಗೋಪಾಲ್ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನವೆಂಬರ್ ೭ ರಂದು 306ನೇ ಹಸಿರು ಭಾನುವಾರ ಕಾರ್ಯಕ್ರಮವು ಉತ್ತರಹಳ್ಳಿಯ ಸುಬ್ರಮಣ್ಯನಗರದಲ್ಲಿ ನಡೆಯಿತು. ಅಲ್ಲಿನ ನ್ಯಾಷನಲ್ ಪ್ರೌಢಶಾಲೆಯ ಎಲ್ಲ ವಿದ್ಯಾರ್ಥಿಗಳೂ ಅಧ್ಯಾಪಕರೂ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದುದೊಂದು ವಿಶೇಷ. ವಿದ್ಯಾರ್ಥಿಗಳು ತಲಾ ಆರುಜನರ ಹತ್ತು ಗುಂಪುಗಳಲ್ಲಿ ಒಟ್ಟು ಅರವತ್ತು ಗಿಡಗಳನ್ನು ನೆಡಲು ಕೈಜೋಡಿಸಿದ್ದರು.

ಇಟ್ಟಮಡು ಬಡಾವಣೆಯ ಉದ್ಯಾನವನ ವಾಯುವಿಹಾರಿಗಳ ಸ್ನೇಹಬಳಗವು ನವೆಂಬರ್ ೧೪ರಂದು ಕರ್ನಾಟಕ ರಾಜ್ಯೋತ್ಸವದ ಆಚರಣೆಯೊಡನೆ 307ನೇ ಹಸಿರು ಭಾನುವಾರದ ಗಿಡ ನೆಡುವ ಕಾರ್ಯಕ್ರಮವನ್ನೂ ಹಮ್ಮಿಕೊಂಡಿತ್ತು. ಕಾರ್ಯಕ್ರಮದಲ್ಲಿ ಶ್ರೀಮತಿ ತೇಜಸ್ವಿನಿಯವರು ಅತಿಥಿಗಳಾಗಿ ಭಾಗವಹಿಸಿದ್ದರು.

### ಇತರ ಕಾರ್ಯಕ್ರಮಗಳು

ನವೆಂಬರ್ ಒಂದರಂದು ಅದಮ್ಯಚೇತನ ಸಂಸ್ಥೆಯ ಉದ್ಯೋಗಿಗಳೂ ಕಾರ್ಯಕರ್ತರೂ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿಯವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಿದರು.

ಬೀದರ್ ನಗರದಲ್ಲಿರುವ ಮಹಿಳೆಯರ ಸ್ವಸಹಾಯ ಗುಂಪು ನಾಲ್ಕು ಲಕ್ಷ ಸದಸ್ಯರನ್ನು ಹೊಂದಿದ್ದು, ದೇಶದಲ್ಲೇ ಅತಿ ದೊಡ್ಡ ಗುಂಪು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಗುಂಪಿನ ವಾರ್ಷಿಕ ಕಾರ್ಯಕ್ರಮ ಇತ್ತೀಚೆಗೆ ಬೀದರ್ ನಗರದಲ್ಲಿ ಜರುಗಿತು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಭಾಷಣ ಮಾಡಿದರು. ಗುಂಪಿನ ಅಧ್ಯಕ್ಷ ಶ್ರೀ ಉಮಾಕಾಂತ ನಾಗಮಾರಪಲ್ಲಿ ಮತ್ತಿತರರು ಉಪಸ್ಥಿತರಿದ್ದರು.

ಶ್ರೀಚೇತನದ ವತಿಯಿಂದ ಕಳೆದ ಅವಧಿಯಲ್ಲಿ ಮೂರು ಆನ್ ಲೈನ್ ಕಾರ್ಯಕ್ರಮಗಳು ನಡೆದಿವೆ. ಎಂದಿನಂತೆ ಪ್ರತಿ ಮಂಗಳವಾರ ದೇಶಭಕ್ತಿ ಗೀತೆ, ಆರೋಗ್ಯ ಅಡುಗೆ, ಔಷಧೀಯ ಸಸ್ಯ ಪರಿಚಯ ಮೊದಲಾದವನ್ನು ಈ ಕಾರ್ಯಕ್ರಮಗಳಲ್ಲಿ ಪ್ರಸ್ತುತ ಪಡಿಸಲಾಗುತ್ತಿದೆ.



### ಅನಂತನಮನ

ಕಳೆದ ನವೆಂಬರ್ ೧೨, ೨೦೨೧ ಶ್ರೀ ಅನಂತಕುಮಾರ್ ಅವರ ಮೂರನೆಯ ಪುಣ್ಯತಿಥಿಯ ಸಂದರ್ಭ. ಬೆಂಗಳೂರು ಆರ್.ವಿ.ಟೀಚರ್ಸ್ ಕಾಲೇಜು ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಭಿಕರನ್ನು ಉದ್ದೇಶಿಸಿ ಕೇಂದ್ರ ಸಚಿವ ಶ್ರೀ ನಿತಿನ್ ಗಡ್ಕರಿಯವರು ಅಭಿವೃದ್ಧಿಪರ ರಾಜಕಾರಣವನ್ನು ಕುರಿತು ವರ್ಚುಯಲ್ ಉಪನ್ಯಾಸ ನೀಡಿದರು (ಭಾಷಣದ ಮುಖ್ಯಾಂಶಗಳನ್ನು ಇದೇ ಸಂಚಿಕೆಯಲ್ಲಿ ನೀಡಿದೆ).

ದೆಹಲಿಯ ಸಮಾರಂಭದಲ್ಲಿ ಪದ್ಮಶ್ರೀ ಪುರಸ್ಕಾರ ಪಡೆದ ಡಾ. ಗಂಗಾಧರ್ ಅಲ್ಲಿಂದ ನೇರವಾಗಿ ಕಾರ್ಯಕ್ರಮಕ್ಕೆ ಬಂದು ಭಾಗವಹಿಸಿದ್ದುದು ವಿಶೇಷ. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಪಿ.ವಿ. ಕೃಷ್ಣಭಟ್ ಮತ್ತು ಕಲಾವಿದ ಶ್ರೀ ಪ್ರಕಾಶ್ ಬೆಳವಾಡಿ, ಡಾ. ಹೆಚ್. ಎಸ್. ನಾಗರಾಜ್. ನ್ಯಾಯಮೂರ್ತಿ ಎನ್. ಕುಮಾರ್ ಮೊದಲಾದವರು ಉಪಸ್ಥಿತರಿದ್ದರು. ಶ್ರೀಮತಿ ಐಶ್ವರ್ಯಾ ಅನಂತಕುಮಾರ್ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಶ್ರೀ ಅನಂತಕುಮಾರ್ ಅವರ ಮೂರನೆಯ ಪುಣ್ಯತಿಥಿಯ ಸಂಜೆ ನಡೆದ ಅನಂತಸ್ಮೃತಿ ಪಂಜಿನ ಮೆರವಣಿಗೆ ಕಾರ್ಯಕ್ರಮವನ್ನು ರಾಜ್ಯ ಕಂದಾಯ ಸಚಿವ ಶ್ರೀ ಆರ್. ಅಶೋಕ್ ಉದ್ಘಾಟಿಸಿದರು. ಬಿಜೆಪಿ ಶಾಸಕ ಶ್ರೀ ಎಂ. ಕೃಷ್ಣಪ್ಪ , ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಪಿ.ವಿ. ಕೃಷ್ಣಭಟ್ ಮೊದಲಾದವರ ಉಪಸ್ಥಿತಿಯಲ್ಲಿ ನೂರಾರು ಜನರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಆರ್.ವಿ. ಕಾಲೇಜಿನಿಂದ ಪ್ರಾರಂಭವಾದ ಮೆರವಣಿಗೆಯ ಮಾರ್ಗದಲ್ಲಿ ಸ್ಥಾಪಿಸಲಾಗಿರುವ ಮಹನೀಯರ ಪ್ರತಿಮೆಗಳ ಅನುಕ್ರಮದಂತೆ, ಅಭಿಮಾನಿಗಳು ಎಂಟು ಗುಂಪುಗಳಲ್ಲಿ ಶ್ರೀ ಅನಂತಕುಮಾರ್, ಕೆಂಪೇಗೌಡ, ಕುವೆಂಪು, ವಿಶ್ವೇಶ್ವರಯ್ಯ, ಅನಕೃ, ಹೆಚ್ ನರಸಿಂಹಯ್ಯ, ಪುತಿನ ಮತ್ತು ಡಿವಿಜಿಯವರ ಚಿತ್ರಗಳನ್ನೂ ಸಂದೇಶಗಳ ಪ್ರದರ್ಶಿಕೆಗಳನ್ನೂ ಹಿಡಿದು ಆಯಾ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ, ಮೆರವಣಿಗೆಯಲ್ಲಿ ಭಾಗವಹಿಸಿದರು. ಸುರಿಯುವ ಮಳೆಯನ್ನು ಲೆಕ್ಕಿಸದೆ ಮೆರವಣಿಗೆಯು ಮುಂಬರಿದು, ಆರ್ ವಿ ಕಾಲೇಜಿನಲ್ಲಿ ಸಂಪನ್ನಗೊಂಡಿತು.

ಅನಂತಪಥ

Editor: **Gopal T.S** | Asst. Editor: **K . Janardhana Thunga** | Layout: **Abhishek Gubbi Creatives**

Inputs: **Poornaprajna / Beluru Sudarshana / Kengeri Chakrapani**

Photographs: **Kengeri Chakrapani / Adamya Chethana / Ananthkumar Prathishthana / Venkatesh Murthy**

Acknowledgements: **Chaya Bapat / Adamya Chethana / Ananthkumar Prathishthana / Ganapati M Bhat**

Printed at: **Rashtrothana Mudranalaya, Chamrajpet, Bengaluru** | Published by: **Dr. Tejaswini Ananthkumar**

For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04

Ph: 080 26568484 | Email: ananth.path@akp.org.in

**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು; ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು. ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ.

To get a e-version of this periodical SMS your name and place to 8884182415

## ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಅನಂತನಮನ ಕಾರ್ಯಕ್ರಮದಲ್ಲಿ ಗಣ್ಯರಿಂದ ಗೌರವಾರ್ಪಣೆ



ಅನಂತಕುಮಾರ್ ಸ್ಮಾರಕ ಉಪನ್ಯಾಸ- ಶ್ರೀಮತಿ ಐಶ್ವರ್ಯಾ ಅನಂತಕುಮಾರ್ ನಿರೂಪಣೆ



ಅನಂತಕುಮಾರ್ ಸ್ಮಾರಕ ನಡಿಗೆ-ಪಂಜಿನ ಮೆರವಣಿಗೆ



ಬೀದರ್ ಮಹಿಳಾ ಸ್ವಸಹಾಯ ಗುಂಪುಗಳ ವಾರ್ಷಿಕೋತ್ಸವದಲ್ಲಿ




ಯುವಪೀಳಿಗೆಗೆ ಪರಂಪರೆ ಪರಿಚಯ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮ



ಇಟ್ಟಮಡುವಿನಲ್ಲಿ ಜರುಗಿದ ರಾಜ್ಯೋತ್ಸವ ಕಾರ್ಯಕ್ರಮ




ಅದಮ್ಯಚೇತನದಲ್ಲಿ ರಾಜ್ಯೋತ್ಸವ



ಹಸಿರು ಭಾನುವಾರ ಕಾರ್ಯಕ್ರಮ

## ಅನಂತ ಚಿತ್ರಸಂಪುಟ

### ಕನ್ನಡನಾಡು ನುಡಿ ಸಂಸ್ಕೃತಿಗಳ ಬಗೆಗೆ ನಿರಂತರ ಚಿಂತನೆ

**ಅನಂತಕುಮಾರರ ದಿನಚರಿಯ ಮಹತ್ವದ ಭಾಗವಾಗಿತ್ತು**













